ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

# ಪಟ್ಟಿ – ೨

ಒಟ್ಟು ಪ್ರಶ್ನೆಗಳು – ೧೧೨

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತಮೂರನೆಯ ಅಧಿವೇಶನ**

**ಬುಧವಾರ, ದಿನಾಂಕ : ೦೮ನೇ ಫೆಬ್ರವರಿ, ೨೦೧೭**

---

## ಸಮೂಹ – III

೧. ಅರಣ್ಯ ಸಚಿವರು.

೨. ಕಂದಾಯ ಸಚಿವರು.

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು.

೪. ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು.

೫. ಕಾರ್ಮಿಕ ಸಚಿವರು.

೬. ಜವಳಿ ಹಾಗೂ ಮುಜರಾಯಿ ರಾಜ್ಯ ಸಚಿವರು.

೭. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು.

---

# ೩೭೧ (ಜೆ) ಮೀಸಲಾತಿ ಅನ್ವಯ "ಅರ್ಹತಾ ಪ್ರಮಾಣ ಪತ್ರ"ದ ಮಾನದಂಡಗಳ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೮೩ (೧೯೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್ ಕರ್ನಾಟಕ ಪ್ರದೇಶದ ೩೭೧ (ಜೆ) ಅಡಿಯ ಮೀಸಲಾತಿಗಾಗಿ " ಅರ್ಹತಾ ಪ್ರಮಾಣಪತ್ರ" ಪಡೆಯಲು ಇರುವ ಮಾನದಂಡಗಳೇನು; (ಸಂಪೂರ್ಣ ವಿವರ ನೀಡುವುದು) ಸದರಿ ಅರ್ಹತಾ ಪ್ರಮಾಣ ಪತ್ರಕ್ಕಾಗಿ ಸ್ವೀಕೃತಗೊಂಡ ಅರ್ಜಿಗಳ ಸಂಖ್ಯೆ ಎಷ್ಟು; ೨೦೧೪–೧೫, ೨೦೧೫–೧೬ ಹಾಗೂ ೨೦೧೬–೧೭ನೇ ಸಾಲಿನಿಂದ ಜಿಲ್ಲಾವಾರು, ವರ್ಷವಾರು ಸಂಪೂರ್ಣ ವಿವರ ನೀಡುವುದು;

(ಆ) ಬಹಳಷ್ಟು ಅರ್ಹ ಪದವೀಧರರು, ವಿದ್ಯಾರ್ಥಿಗಳು ಹಾಗೂ ಸರ್ಕಾರಿ ನೌಕರರು ಅರ್ಹತಾ ಪ್ರಮಾಣ ಪತ್ರ ಪಡೆಯದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಅರ್ಹ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರ ನೀಡುವ ಬಗ್ಗೆ ಸರ್ಕಾರದ ಮುಂದಿರುವ ಯೋಜನೆಗಳೇನು;

(ಇ) ಸಾಕಷ್ಟು ಪ್ರಚಾರದ ಮುಖಾಂತರ, ಶಿಬಿರಗಳನ್ನು ನಡೆಸುವುದರ ಮುಖಾಂತರ ಅರ್ಹತಾ ಪ್ರಮಾಣ ಪತ್ರ ಪಡೆದುಕೊಳ್ಳುವ ನಿಟ್ಟಿನಲ್ಲಿ ಸರ್ಕಾರ ಮುಂದಾಗುವುದೇ? (ಮಾಹಿತಿ ನೀಡುವುದು)

3

# ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸುರಿದ ಭಾರಿ ಮಳೆ/ ಪ್ರವಾಹದ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೮೪ (೨೦೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ೨೦೧೪ ಆಗಸ್ಟ್–ಸೆಪ್ಟೆಂಬರ್‌ನಲ್ಲಿ ಹಾಗೂ ೨೦೧೫ ಆಗಸ್ಟ್–ಸೆಪ್ಟೆಂಬರ್‌ನಲ್ಲಿ ಸುರಿದ ಭಾರಿ ಮಳೆಯಿಂದ ನಾಲಾ ಕೊಳ್ಳಗಳಲ್ಲಿ ಪ್ರವಾಹ ಉಂಟಾಗಿ ಬಹಳಷ್ಟು ಹಾನಿಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಇದೆಯೇ; (ಪ್ರತ್ಯೇಕ ಮಾಹಿತಿ ನೀಡುವುದು)

(ಆ) ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ೨೦೧೪ ಆಗಸ್ಟ್–ಸೆಪ್ಟೆಂಬರ್‌ನಲ್ಲಿ ಹಾಗೂ ೨೦೧೫ ಆಗಸ್ಟ್–ಸೆಪ್ಟೆಂಬರ್‌ನಲ್ಲಿ ಪ್ರವಾಹದಿಂದ ಆದ ಹಾನಿಯ ಸಮೀಕ್ಷೆ ಮಾಡಲಾಗಿದೆಯೇ (ಪ್ರತ್ಯೇಕ ವರ್ಷಾವಾರು, ಜಿಲ್ಲಾವಾರು, ಮಣ್ಣುಕೊಚ್ಚಿ ಹೋಗಿರುವ ಹೊಲಗಳ ವಿಸ್ತೀರ್ಣವಾರು, ಬೆಳೆಹಾನಿ, ಮನೆಹಾನಿ, ಜಾನುವಾರು ಹಾನಿ ಪ್ರತ್ಯೇಕ ಸಮೀಕ್ಷೆಯಲ್ಲಿ ಮಾಹಿತಿ ನೀಡುವುದು)

(ಇ) ಈ ನಿಟ್ಟಿನಲ್ಲಿ ಸರ್ಕಾರದ ಕೈಗೊಂಡ ಕ್ರಮಗಳೇನು; ಸದರಿ ಹಾನಿಗೆ ಪರಿಹಾರ ನೀಡಲು ಸರ್ಕಾರ ಮುಂದಾಗುವುದೇ? (ಮಾಹಿತಿ ನೀಡುವುದು)

## ರಾಜ್ಯದಲ್ಲಿ ಹೊಸ ತಾಲ್ಲೂಕುಗಳ ರಚನೆ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೮೫ (೨೦೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಹೊಸ ತಾಲ್ಲೂಕುಗಳ ರಚನೆಗಾಗಿ ಸರ್ಕಾರದ ಮುಂದೆ ಪ್ರಸ್ತಾವನೆಗಳು/ ಬೇಡಿಕೆಗಳು ಇವೆಯೇ; (ಇದ್ದರೆ, ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಸರ್ಕಾರದ ವತಿಯಿಂದ ಹೊಸ ತಾಲ್ಲೂಕು ರಚನೆಗಾಗಿ ಸಮ್ಮತಿ/ ಒಪ್ಪಿಗೆ ಸೂಚಿಸಲಾಗಿದೆಯೇ; (ಮಾಹಿತಿ ನೀಡುವುದು) ಇಲ್ಲದಿದ್ದರೆ, ಹೊಸ ತಾಲ್ಲೂಕು ರಚನೆಗೆ ಸರ್ಕಾರ ಮುಂದಾಗುವುದೇ; (ಮಾಹಿತಿ ನೀಡುವುದು)

(ಇ) ಹೊಸ ತಾಲ್ಲೂಕು ರಚನೆಗಾಗಿ ಬೇಕಾಗುವ ಹಣಕಾಸಿನ ಮೊತ್ತ ಎಷ್ಟು? (ಆರ್ಥಿಕ ಹೊರೆಯ ಸಂಪೂರ್ಣ ಮಾಹಿತಿ ನೀಡುವುದು)

## ಕಲಬುರ್ಗಿಯಲ್ಲಿ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ "ಸಿಂಥೆಟಿಕ್ ಟ್ರ್ಯಾಕ್" ನಿರ್ಮಾಣದ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೮೬ (೨೦೦) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿಯಲ್ಲಿ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ "ಸಿಂಥೆಟಿಕ್ ಟ್ರ್ಯಾಕ್" ನಿರ್ಮಾಣ ಮಾಡಲಾಗಿದೆಯೇ; ಮಾಡಿದ್ದಲ್ಲಿ, ಇದರ ಯೋಜನಾ ವೆಚ್ಚವೆಷ್ಟು; (ಗುತ್ತಿಗೆದಾರರ ಹೆಸರು ಪಾವತಿಯಾದ ಮೊತ್ತದೊಂದಿಗೆ ಸಂಪೂರ್ಣ ವಿವರ ನೀಡುವುದು)

(ಆ) ಸದರಿ "ಸಿಂಥೆಟಿಕ್ ಟ್ರ್ಯಾಕ್" ನಿರ್ಮಾಣ ಕಾಮಗಾರಿಯಲ್ಲಿ ಕಳಪೆ ಮಟ್ಟದ ಬಗ್ಗೆ ದೂರುಗಳೇನಾದರು ಬಂದಿವೆಯೇ; ಬಂದಿದ್ದರೆ, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಇದರಿಂದ ಸರ್ಕಾರಕ್ಕೆ ಆದಂತಹ ಹಾನಿ ಎಷ್ಟು ಮತ್ತು ತಪ್ಪಿತಸ್ಥರ ಮೇಲೆ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)

## ಕೃಷ್ಣ, ಭೀಮಾ, ನಾರಾಯಣಪುರ, ಕಾರಂಜಿ, ಮಲ್ಲಾಮರಿ ಅಣೆಕಟ್ಟು ಪುನಶ್ಚೇತನ (ಡ್ರಿಪ್) ಯೋಜನೆಯ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೮೭ (೨೦೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೃಷ್ಣ, ಭೀಮಾ, ನಾರಾಯಣಪುರ, ಕಾರಂಜಿ, ಮಲ್ಲಾಮರಿ ಹಾಗೂ ಆಲಮಟ್ಟಿ ಅಣೆಕಟ್ಟೆಗಳನ್ನು ಪುನಶ್ಚೇತನ (ಡ್ರಿಪ್) ಯೋಜನೆಯಡಿಯಲ್ಲಿ ಅನುಷ್ಠಾನಕ್ಕೆ ತರಲಾಗಿರುವ ನೀರಾವರಿ ಯೋಜನೆಗಳಾವುವು; (ಅಣೆಕಟ್ಟುಗಳ ಮಾಹಿತಿ, ಯೋಜನಾ ವೆಚ್ಚ, ನೀರಿನ ಸಂಗ್ರಹ ಹಾಗೂ ಕಾಲುವೆಗಳ ಉದ್ದ ಇತ್ಯಾದಿಗಳ ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಯೋಜನೆಗೆ ಸಿದ್ದಪಡಿಸಿರುವ ಯೋಜನಾ ವೆಚ್ಚವೆಷ್ಟು; ಪ್ರಸ್ತುತ ಈ ಮೇಲ್ಕಂಡ ಯೋಜನೆಗಳು ಯಾವ ಸ್ಥಿತಿಯಲ್ಲಿವೆ; ಈ ಕಾಮಗಾರಿಗಳು ನಿಧಾನಗತಿಯಲ್ಲಿ ಸಾಗಲು ಕಾರಣಗಳೇನು ಹಾಗೂ ಯಾವ ಕಾಲಮಿತಿಯೊಳಗೆ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಸದರಿ ಯೋಜನೆಯಡಿಯಲ್ಲಿ ನಿರ್ವಹಣೆ ಮತ್ತು ಆಧುನೀಕರಣಕ್ಕಾಗಿ ಕೈಗೊಂಡ ವೆಚ್ಚ ಹಾಗೂ ದುರಸ್ತಿಗಾಗಿ ನಿರ್ವಹಿಸಿರುವ ವೆಚ್ಚವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಈ ಯೋಜನೆ ಪೂರ್ಣಗೊಂಡ ನಂತರ ಈಗಿರುವ ನೀರಿನ ಪ್ರಮಾಣಕ್ಕಿಂತ ಹೆಚ್ಚು ನೀರು ಸಂಗ್ರಹವಾಗುವುದೇ; ಹಾಗಿದ್ದಲ್ಲಿ, ಹೆಚ್ಚುವರಿ ನೀರಿನ ಪ್ರಮಾಣವೆಷ್ಟು? (ಮಾಹಿತಿ ನೀಡುವುದು)

## ಹೇಮಾವತಿ ನಾಲಾ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೮ (೨೧೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೇಮಾವತಿ ನಾಲಾ ಬಾಗೂರು ನವಿಲೆಯ ನಾಗಮಂಗಲ ಶಾಖಾದಲ್ಲಿ ೮೫೦ ಕ್ಯೂಸೆಕ್ಸ್ ನೀರು ಹರಿಯಬೇಕಾಗಿದ್ದರೂ ಸಹ ಅಷ್ಟು ಪ್ರಮಾಣದಲ್ಲಿ ನೀರು ಹರಿಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ೩೦ ವರ್ಷಗಳಾದರೂ ನಾಗಮಂಗಲ ಶಾಖಾ ನಾಲೆಯ ವಿತರಣಾ ನಾಲಾ–೧೭, ೧೮ ಮತ್ತು ೧೯ರ ಕಾಮಗಾರಿ ಪೂರ್ಣಗೊಳ್ಳದಿರಲು ಕಾರಣವೇನು; ಹಾಗಿದ್ದಲ್ಲಿ, ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು;

(ಇ) ಉದ್ದೇಶಿತ ಯೋಜನೆಗೆ ಬಳಸಿಕೊಂಡಿರುವ ರೈತರ ಜಮೀನಿಗೆ ಪರಿಹಾರ ಧನ ಯಾವಾಗ ವಿತರಿಸಲಾಗುವುದು; ರೈತರಿಗೆ ಪರಿಹಾರ ಧನ ವಿತರಿಸದಿದ್ದಲ್ಲಿ ರೈತರು ಈ ಯೋಜನೆಗೆ ಅಡ್ಡಿಪಡಿಸುವ ಆತಂಕವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವಿವರ ನೀಡುವುದು;

(ಈ) ನಾಗಮಂಗಲಕ್ಕೆ ಬರುವ ಹೇಮಾವತಿ ಎಡದಂಡೆ ನಾಲದಲ್ಲಿ ೪೦೦ ಕ್ಯೂಸೆಕ್ಸ್ ನೀರು ಹರಿಯಬೇಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ನಾಲಾದಲ್ಲಿ ತೂಬುಗಳು ಹಾಳಾಗಿರುವುದರಿಂದ ೧೦೦ ಕ್ಯೂಸೆಕ್ಸ್ ನೀರು ಹರಿಯದಿರುವುದು ನಿಜವೇ; ಹಾಗಿದ್ದಲ್ಲಿ ೪೦೦ ಕ್ಯೂಸೆಕ್ಸ್ ನೀರು ಹರಿಸಲು ಸರ್ಕಾರ ಕ್ರಮ ಕೈಗೊಳ್ಳವುದೇ; ಹಾಗಿದ್ದಲ್ಲಿ ಯಾವಾಗ ಮಾಡಲಾಗುವುದು?

## ಮಂಡ್ಯ ನಗರದ ಒಳಕ್ರೀಡಾಂಗಣದ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೯ (೨೧೬) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ನಗರದಲ್ಲಿ ಒಳ ಕ್ರೀಡಾಂಗಣವನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಗಿತ್ತು;

(ಆ) ಇದರ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಇದರ ಕಾಮಗಾರಿಗೆ ಸರ್ಕಾರದಿಂದ ಮಂಜೂರಾಗಿರುವ ಮೊತ್ತ ಎಷ್ಟು;

(ಈ) ಈ ಕಾಮಗಾರಿಯ ಗುತ್ತಿಗೆಯನ್ನು ಯಾರಿಗೆ ನೀಡಲಾಗಿದೆ; (ಹೆಸರು, ವಿಳಾಸದೊಂದಿಗೆ ಮಾಹಿತಿ ನೀಡುವುದು)

(ಉ) ಈ ಒಳ ಕ್ರೀಡಾಂಗಣ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? (ಮಾಹಿತಿ ನೀಡುವುದು)

## ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ ದೇವಸ್ಥಾನದ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೯೦ (೨೨೦) ಮಾನ್ಯ ಜವಳಿ ಹಾಗೂ ಮುಜರಾಯಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಸುಪ್ರಸಿದ್ಧ ಶ್ರೀರಂಗನಾಥಸ್ವಾಮಿ ದೇವಾಲಯವು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮವೇನು;

(ಆ) ಶ್ರೀರಂಗಪಟ್ಟಣದ ಸುತ್ತುಮುತ್ತಲಿನ ಸಾರ್ವಜನಿಕರ ಆರಾಧ್ಯದೈವ ಹಾಗೂ ದೇಶ, ವಿದೇಶದ ಭಕ್ತಾದಿ, ಪ್ರವಾಸಿಗರು ಬಂದು ಹೋಗುವ ಹಿನ್ನೆಲೆಯಲ್ಲಿ, ಈ ದೇವಸ್ಥಾನವನ್ನು ಉನ್ನತ ದರ್ಜೆಗೇರಿಸಿ

ಶಿಥಿಲಗೊಂಡಿರುವ ದೇವಾಲಯವನ್ನು ಸುಸಜ್ಜಿತಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ; ಹಾಗಿದ್ದಲ್ಲಿ ಎಷ್ಟು ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು;

(ಇ) ಇದರಂತೆ ಮಂಡ್ಯ ಜಿಲ್ಲೆಯಲ್ಲಿ ಶಿಥಿಲಾವಸ್ಥೆಯಲ್ಲಿರುವ ದೇವಾಲಯಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ?

## ಅರಣ್ಯ ಪ್ರದೇಶದಲ್ಲಿ ಮರ ಕಟಾವು ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೯೧ (೨೧೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಯಾವ ಯಾವ ಅರಣ್ಯ ಪ್ರದೇಶದಲ್ಲಿ ಮರಗಳನ್ನು ಕಟಾವು ಮಾಡಲಾಗಿದೆ; ಮರಗಳನ್ನು ಕಟಾವು ಮಾಡಲಾಗಿರುವ ಉದ್ದೇಶವೇನು; (ವಿವರ ನೀಡುವುದು)

(ಆ) ಎಷ್ಟು ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಮರಗಳನ್ನು ಕಟಾವು ಮಾಡಿದಂತಾಗಿದೆ; (ಅರಣ್ಯ ವಿಭಾಗವಾರು ಮಾಹಿತಿ ನೀಡುವುದು)

(ಇ) ಹಾಗಿದ್ದಲ್ಲಿ, ಯಾವ ಯಾವ ಜಾತಿಯ ಮರಗಳನ್ನು ಕಟಾವು ಮಾಡಲಾಗಿದೆ; (ವಿವರ ನೀಡುವುದು)

(ಈ) ಈ ಕಟಾವುಗೊಳಿಸಿದ ಮರಗಳನ್ನು ಯಾವ ರೀತಿ ಉಪಯೋಗಿಸಿಕೊಳ್ಳಲಾಗಿದೆ; (ವಿವರ ನೀಡುವುದು)

(ಉ) ಇದರಿಂದ ಅರಣ್ಯ ಇಲಾಖೆಗೆ ಬಂದಿರುವ ಆದಾಯವೆಷ್ಟು; (ಅರಣ್ಯ ವಿಭಾಗವಾರು ಮಾಹಿತಿ ನೀಡುವುದು)

(ಊ) ಮರ ಕಟಾವು ಮಾಡಿದ ಪ್ರದೇಶದಲ್ಲಿ ಅರಣ್ಯ ಬೆಳೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ, ವಿವರ ನೀಡುವುದು?

## ಕಂದಾಯ ಜಮೀನಿನ "ಡಿ" ನೋಟಿಫಿಕೇಶನ್ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೬೨ (೨೧೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ "ಡಿ" ನೋಟಿಫಿಕೇಶನ್ ಮಾಡಿರುವ ಕಂದಾಯ ಜಮೀನು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ "ಡಿ" ನೋಟಿಫಿಕೇಶನ್ ಮಾಡಿರುವ ವಿವಿಧ ಉದ್ದೇಶಗಳೇನು; ಇದರಲ್ಲಿ ಕೈಗಾರಿಕೆ, ನಿವೇಶನ, ಇತ್ಯಾದಿಗಳಿಗೆ ನೀಡಿರುವ ಜಮೀನು ಎಷ್ಟು; (ವಿವರ ನೀಡುವುದು)

(ಇ) ಇದರಿಂದ ಸರ್ಕಾರಕ್ಕೆ ಬಂದಿರುವ ಆದಾಯ ಎಷ್ಟು;

(ಈ) ಕಳೆದ ಮೂರು ವರ್ಷಗಳಲ್ಲಿ ರೈತರ ಸಾಗುವಳಿ ಜಮೀನಿಗೆ ಸಾಗುವಳಿ ಚೀಟಿ ನೀಡಲಾಗಿರುವ ಭೂಮಿ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಉ) ರಾಜ್ಯದಲ್ಲಿ ರೈತರಿಗೆ ಭೀಮಾ ಯೋಜನೆ ಜಾರಿಯಲ್ಲಿರುವುದು ನಿಜವೇ; ಹಾಗಿದ್ದಲ್ಲಿ, ಎಷ್ಟು ಜನ ರೈತರು ಈ ಯೋಜನೆಯಡಿ ಸದಸ್ಯತ್ವ ಹೊಂದಿರುತ್ತಾರೆ? (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

## ಫಲಾನುಭವಿಗಳಿಗೆ ಅನುದಾನ ಮಂಜೂರಾತಿ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೯೩ (೧೪೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಯಲ್ಲಿ ಕಳೆದ ೧೦ ವರ್ಷಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಜನಾಂಗಗಳಿಗಾಗಿ ಸಣ್ಣ ನೀರಾವರಿ ಇಲಾಖೆಯಿಂದ ಯಾವ ಯಾವ ಯೋಜನೆಗಳಿಗೆ ಎಷ್ಟು ಅನುದಾನ ಮಂಜೂರಾತಿ ನೀಡಲಾಗಿದೆ; (ಯೋಜನೆವಾರು ವಿವರವಾದ ಮಾಹಿತಿ ನೀಡುವುದು)

(ಆ) ಕಳೆದ ೧೦ ವರ್ಷಗಳ ಅವಧಿಯಲ್ಲಿ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ ಯೋಜನೆಯಡಿ ಅವಳಿ ಜಿಲ್ಲೆಯ ಎಷ್ಟು ಫಲಾನುಭವಿಗಳಿಗೆ ಯಾವ ಯಾವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ; (ಫಲಾನುಭವಿಗಳ ಹೆಸರು ಸಮೇತ ವಿವರವಾದ ಮಾಹಿತಿ ನೀಡುವುದು)

(ಇ) ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಎಷ್ಟು ಸಣ್ಣ ನೀರಾವರಿ ಕೆರೆಗಳು ಇವೆ; ಇವುಗಳ ಅಭಿವೃದ್ಧಿಗೆ ಸರ್ಕಾರವು ಎಷ್ಟು ಅನುದಾನವನ್ನು ಮಾಡಿದೆ?

## ಮಾನ್ವಿ ಪಟ್ಟಣದಲ್ಲಿ ಮಿನಿ ವಿಧಾನ ಸೌಧ ನಿರ್ಮಾಣದ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೯೪ (೧೬೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆಯಲ್ಲಿ ಬರುವ ತಾಂಡಾ, ಗೊಲ್ಲರಹಟ್ಟಿ, ಹಾಗೂ ಕ್ಯಾಂಪ್‌ಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಆ) ರಾಯಚೂರು ಜಿಲ್ಲಾಡಳಿತದಿಂದ ಗುರುತಿಸಲ್ಪಟ್ಟ ತಾಂಡಾ, ಕ್ಯಾಂಪ್, ಗೊಲ್ಲರಹಟ್ಟಿಗಳಾವುವು; (ವಿವರ ನೀಡುವುದು) ಇವುಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಹಾಕಿಕೊಂಡಿರುವ ಕಾಲಮಿತಿ ಎಷ್ಟು;

(ಇ) ಮಾನ್ವಿ ಪಟ್ಟಣದಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಈ) ರಾಯಚೂರು ನಗರದಲ್ಲಿ "ಜಿಲ್ಲಾಡಳಿತ ಭವನ" ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ರಾಯಚೂರು ಜಿಲ್ಲೆಯ ಏತ ನೀರಾವರಿ ಯೋಜನೆಗಳ ಕುರಿತು

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೯೫ (೧೬೬) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಾನ್ವಿ ತಾಲ್ಲೂಕಿನಲ್ಲಿ ಬರುವ ದದ್ದಲ್, ಮೊದಲಾಪೂರ, ಏತ ನೀರಾವರಿ ಕಾಮಗಾರಿಗಳನ್ನು ಪೂರೈಸಲು ಸರ್ಕಾರ ತೆಗದುಕೊಂಡ ಕ್ರಮಗಳೇನು;

(ಆ) ರಾಯಚೂರು ತಾಲ್ಲೂಕಿನ ಕುರ್ತುಕೊಂಡ ಏತ ನೀರಾವರಿ ಯೋಜನೆಯು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಪುನರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಇ) ೨೦೧೬-೧೭ರಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ರಾಯಚೂರು ಜಿಲ್ಲೆಗೆ ನೀಡಿರುವ ಅನುದಾನ ಎಷ್ಟು? (ವಿವರ ನೀಡುವುದು)

## ರಾಯಚೂರು ಜಿಲ್ಲೆಯ ಅರಣ್ಯ ಇಲಾಖೆ ಕುರಿತು

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೯೬ (೧೬೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ೨೦೧೬-೧೭ರಲ್ಲಿ ರಾಯಚೂರು ಜಿಲ್ಲೆಯ ಅರಣ್ಯ ಪ್ರದೇಶವನ್ನು ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಆ) ರಾಯಚೂರು ಜಿಲ್ಲೆಯಲ್ಲಿ ಅರಣ್ಯ ಇಲಾಖೆಗೆ ಸೇರಿರುವ ಭೂಮಿ ಎಷ್ಟು;

(ಇ) ಅರಣ್ಯ ಇಲಾಖೆಗೆ ಸೇರಿರುವ ಭೂಮಿಯಲ್ಲಿ ಕುಡಿಯುವ ನೀರು ಹಾಗೂ ಶಾಲಾ ಕೊಠಡಿ ನಿರ್ಮಾಣ ಮಾಡಲು ಅವಕಾಶ ಕಲ್ಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಈ) ೨೦೧೬-೧೭ರಲ್ಲಿ ರಾಯಚೂರು ಜಿಲ್ಲೆಯಲ್ಲಿ ಮಂಜೂರಾಗಿರುವ "ಟ್ರೀಪಾರ್ಕ್" ಗಳು ಎಷ್ಟು?

## ರಾಯಚೂರು ನಗರದಲ್ಲಿ ಜಿಲ್ಲಾ 'ಕೋರ್ಟ್ ಭವನ' ನಿರ್ಮಾಣ ಮಾಡುವ ಬಗ್ಗೆ

**ಶ್ರೀ ಎನ್.ಎಸ್ ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೯೭ (೧೬೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಾನ್ವಿಯಲ್ಲಿ ಕೋರ್ಟ್ ಕಾಂಪ್ಲೆಕ್ಸ್ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಮಾನ್ವಿ ತಾಲ್ಲೂಕು ಮ್ಯಾಜಿಸ್ಟ್ರೇಟ್ ಕೋರ್ಟ್ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ರಾಯಚೂರು ನಗರದಲ್ಲಿ ಜಿಲ್ಲಾ 'ಕೋರ್ಟ್ ಭವನ' ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಸ್ಮಶಾನಗಳ ವಿಚಾರ

**ಶ್ರೀ ಎಂ.ಬಿ. ಭಾನುಪ್ರಕಾಶ್ (ವಿಧಾನಸಭಾ ಕ್ಷೇತ್ರ):–**

೯೮ (೨೧೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಯಾವ ಯಾವ ಗ್ರಾಮಗಳಲ್ಲಿ ಸ್ಮಶಾನವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ ; (ವಿವರ ನೀಡುವುದು)

(ಆ) ಸ್ಮಶಾನ ಇಲ್ಲದಿರುವ ಗ್ರಾಮಗಳಲ್ಲಿ ಸರ್ಕಾರ ಪರ್ಯಾಯವಾಗಿ ಮಾಡಿರುವ ವ್ಯವಸ್ಥೆಗಳೇನು ; (ವಿವರ ನೀಡುವುದು)

(ಇ) ಎಷ್ಟು ಗ್ರಾಮಗಳಲ್ಲಿ ಸ್ಮಶಾನಕ್ಕೆ ಜಮೀನು ಖರೀದಿಸಲಾಗಿದೆ ; (ವಿವರ ನೀಡುವುದು)

(ಈ) ಖರೀದಿಸಲಾಗಿರುವ ಜಮೀನಿಗೆ ಖರ್ಚಾಗಿರುವ ಹಣವೆಷ್ಟು ? (ವಿವರ ನೀಡುವುದು)

## ಶಿವಮೊಗ್ಗ ತಾಲ್ಲೂಕು ಮತ್ತೂರು ಹೊಸಹಳ್ಳಿ ಬಳಿ ತುಂಗಾ ನದಿಗೆ ತಡೆಗೋಡೆ ವಿಚಾರ

**ಶ್ರೀ ಎಂ.ಬಿ. ಭಾನುಪ್ರಕಾಶ್ (ವಿಧಾನಸಭಾ ಕ್ಷೇತ್ರ):–**

೯೯ (೨೧೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶಿವಮೊಗ್ಗ ತಾಲ್ಲೂಕಿನ ಮತ್ತೂರು–ಹೊಸಹಳ್ಳಿಯಲ್ಲಿ ತುಂಗಾನದಿಗೆ ನಿರ್ಮಿಸಲಾಗುತ್ತಿರುವ ತಡೆಗೋಡೆ ಕಾಮಗಾರಿ ಯಾವ ಹಂತದಲ್ಲಿದೆ ; (ವಿವರ ನೀಡುವುದು)

(ಆ) ತಡೆಗೋಡೆ ನಿರ್ಮಾಣ ಕಾಮಗಾರಿಯು ಯಾವಾಗ ಮುಗಿಯುವುದು ; (ವಿವರ ನೀಡುವುದು)

(ಇ) ಸದರಿ ಕಾಮಗಾರಿಯನ್ನು ಸಕಾಲದಲ್ಲಿ ಮುಗಿಸದಿರುವುದಕ್ಕೆ ಇರುವ ಕಾರಣಗಳೇನು ? (ವಿವರ ನೀಡುವುದು)

## ಕ್ರಯಕ್ಕೆ ನೀಡಿರುವ ಭೂಮಿ ಒತ್ತುವರಿ ಬಗ್ಗೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–**

೧೦೦ (೨೧೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅರಣ್ಯ ಇಲಾಖೆಯಿಂದ ಮೈಸೂರು ಕಾಗದ ಕಾರ್ಖಾನೆ (M.P.M) ಭದ್ರಾವತಿ, ಇವರಿಗೆ ಕಚ್ಚಾ ಸಾಮಾಗ್ರಿ ಬೆಳೆಯುವ ಸಂಬಂಧ ಎಷ್ಟು ಅರಣ್ಯ ಭೂಮಿಯನ್ನು ನೀಡಲಾಗಿದೆ ; (ಗ್ರಾಮ ಸರ್ವೇ ನಂಬರ್ ವಿಸ್ತೀರ್ಣ ಒಳಗೊಂಡಂತೆ ವಿವರವಾದ ಮಾಹಿತಿ ನೀಡುವುದು)

(ಆ) ಈ ಭೂಮಿಯನ್ನು ಕ್ರಯಕ್ಕೆ ನೀಡಲಾಗಿದೆಯೇ ಅಥವಾ ಗುತ್ತಿಗೆಗೆ ನೀಡಲಾಗಿದೆಯೇ ; ಇದರ ನಿಯಮ ನಿಬಂಧನೆಗಳೇನು ; (ವಿವರವಾಗಿ ಮಾಹಿತಿ ನೀಡುವುದು)

(ಇ) ಸದರಿ ಭೂಮಿಯನ್ನು ಯಾರಾದರು ಒತ್ತುವರಿ ಮಾಡಿದ್ದಾರೆಯೇ ; ಮಾಡಿದ್ದರೆ ಇದರ ಸಂಬಂಧ ಸರ್ಕಾರ ಏನು ಕ್ರಮ ಕೈಗೊಂಡಿದೆ ; (ವಿವರವಾದ ಮಾಹಿತಿ ನೀಡುವುದು)

(ಈ) ಸದರಿ ಭೂಮಿಯಲ್ಲಿ ಕಾರ್ಖಾನೆಯವರು ಯಾವ ಯಾವ ಮರಗಳನ್ನು ಬೆಳೆದಿರುತ್ತಾರೆ ; ಬೆಳೆದ ಮರಗಳನ್ನು ಕಾರ್ಖಾನೆಯವರು ಉಪಯೋಗಿಸಿದ್ದಾರೆಯೇ ಅಥವಾ ಬೇರೆಯವರಿಗೆ ನೀಡಿದ್ದಾರೆಯೇ ; (ವಿವರವಾದ ಮಾಹಿತಿ ನೀಡುವುದು)

(ಉ) ಸರ್ಕಾರದ ಸಹಾಯವಿದ್ದರೂ ಮೈಸೂರು ಕಾಗದ ಕಾರ್ಖಾನೆ ನಷ್ಟ ಹೊಂದಲು ನಿಖರವಾದ ಕಾರಣಗಳೇನು ;

(ಊ) ಖಾಸಗಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್ ಲಾಭದಲ್ಲಿ ಇರಲು ನಿಖರವಾದ ಕಾರಣಗಳೇನು ? (ವಿವರ ನೀಡುವುದು)

## S.I.A ಕಾಮಗಾರಿ ಕುರಿತು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೧೦೧ (೨೧೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) S.I.A (Social Impact Assessment) ಅಂದರೆ ಏನು ; ಇದು ಭೂಸ್ವಾಧೀನ ಪ್ರಕ್ರಿಯೆಯೇ ; ಇದು ಯಾವ ದಿನಾಂಕದಿಂದ ಜಾರಿಗೆ ಬಂದಿದೆ ; (ವಿವರವಾದ ಮಾಹಿತಿ ಕೊಡುವುದು)

(ಆ) ಇದು ಜಾರಿಗೆ ಬಂದ ದಿನಾಂಕದಿಂದ S.I.A (Social Impact Assessment) ಇಲ್ಲಿಯವರೆಗೆ ಎಷ್ಟು ಎನ್.ಜಿ.ಓ.ಗಳನ್ನು ಎಂಪ್ಯಾಲ್‌ಮೆಂಟ್ ನೋಂದಣಿ/ಎಕ್ಸ್‌ಪ್ರೇಷನ್ ಆಫ್ ಇನ್‌ಟ್ರಸ್ಟ್ ಸಲ್ಲಿಸಲು ನೋಂದಣಿ ಮಾಡಲಾಗಿದೆ ; (ಸಂಪೂರ್ಣ ಸರ್ಕಾರಿ ಆದೇಶದೊಂದಿಗೆ ಮಾಹಿತಿ ನೀಡುವುದು)

(ಇ) ದಿನಾಂಕ: ೨೭–೦೧–೨೦೧೭ಕ್ಕೆ ಎಷ್ಟು ಎನ್.ಜಿ.ಓ ಗಳು S.I.A ಕಾಮಗಾರಿಯ ಕಾರ್ಯಾದೇಶಗಳನ್ನು ಪಡೆದಿವೆ ; ಇವುಗಳಲ್ಲಿ ಪೂರ್ಣಗೊಳಿಸಿರುವುದು ಎಷ್ಟು ; ಪಡೆದ ಹಣ ಎಷ್ಟು ; (ವಿವರವಾಗಿ ಜಿಲ್ಲಾವಾರು, ಯೋಜನಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಈ) ಎತ್ತಿನ ಹೊಳೆ ಯೋಜನೆಯ S.I.A ಕಾಮಗಾರಿಯನ್ನು ಎನ್.ಜಿ.ಓ. ಗಳಿಗೆ ನೀಡುವ ಸಂಬಂಧ ಜಿಲ್ಲಾಧಿಕಾರಿಗಳು, ಜಿಲ್ಲಾ ಯೋಜನಾ ವಲಯದಲ್ಲಿ ಎನ್.ಜಿ.ಓ. ಗಳ ನೈಜತೆಯನ್ನು ಪರೀಕ್ಷಿಸದೆ ಕಾಮಗಾರಿಗಳನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದರ ಸಂಬಂಧ ಯಾವ ಕ್ರಮ ಕೈಗೊಳ್ಳಲಾಗುವುದು ?

## ಜಮೀನುಗಳ ವರ್ಗೀಕರಣದ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೧೦೨ (೨೦೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಜಮೀನುಗಳನ್ನು ಯಾವ ಯಾವ ರೀತಿ ವರ್ಗೀಕರಿಸಲಾಗಿದೆ ; ಕೃಷಿ ಜಮೀನನ್ನು ಯಾವ ಯಾವ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಬಹುದಾಗಿದೆ ; (ಸಂಪೂರ್ಣ ವಿವರವಾದ ಮಾಹಿತಿ ಕೊಡುವುದು)

(ಆ) ವಿವಿಧ ಉದ್ದೇಶಗಳಿಗಾಗಿ ಭೂ ಪರಿವರ್ತನೆಗೊಂಡ ಕೃಷಿ ಜಮೀನುಗಳನ್ನು ಆರ್.ಟಿ.ಸಿ.ನಲ್ಲಿ ಯಾವ ಬದಲಾವಣೆ ಮಾಡಿದೆ ಅದೇ ರೀತಿ ಮುಂದುವರೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಇದರಿಂದ ಸಮಾಜದಲ್ಲಿ ಸಿವಿಲ್ ವ್ಯಾಜ್ಯಗಳು ಜಾಸ್ತಿಯಾಗಿ ಸಮಾಜದ ಸ್ವಾಸ್ತ್ಯ ಕೆಡುತ್ತಿರುವುದು ಸರ್ಕಾರ ಗಮನಿಸಿದೆಯೇ ;

(ಈ) ಗಮನಿಸಿದ್ದರೆ, ಸರ್ಕಾರವು ಇದರ ಸಂಬಂಧ ಯಾವ ಕ್ರಮ ಕೈಗೊಂಡಿದೆ ;

(ಉ) ಇದನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು ?

## ಕ್ರಿಕೆಟ್ ಅಸೋಸಿಯೇಷನ್ ಸಂಸ್ಥೆಗೆ ಅನುದಾನ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೧೦೩ (೨೦೮) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಸಂಸ್ಥೆಯನ್ನು ಯಾವಾಗ ಸ್ಥಾಪಿಸಲಾಯಿತು ; ಇದರ ಧ್ಯೇಯೋದ್ದೇಶ, ನಿಯಮ ನಿಬಂಧನೆಗಳೇನು ; (ವಿವರವಾದ ಮಾಹಿತಿ ನೀಡುವುದು)

(ಆ) ಸದರಿ ಸಂಸ್ಥೆಗೆ ಚಿನ್ನಸ್ವಾಮಿ ಕ್ರೀಡಾಂಗಣ ಜಾಗವನ್ನು ಕ್ರಯ/ ಗುತ್ತಿಗೆ ನೀಡಲಾಗಿದೆಯೇ ; ಯಾವ ದಿನಾಂಕದಿಂದ ಎಷ್ಟು ವರ್ಷಗಳವರೆಗೆ ಎಷ್ಟು ಮೊತ್ತಕ್ಕೆ ನೀಡಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಸದರಿ ಸಂಸ್ಥೆಗೆ ಕಳೆದ ೩ ವರ್ಷಗಳಿಂದ ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದಿಂದ ಎಷ್ಟು ಅನುದಾನ ಬಿಡುಗಡೆಯಾಗಿದೆ ; ಇದನ್ನು ಯಾವ ಕಾರ್ಯಗಳಿಗೆ ವಿನಿಯೋಗಿಸಲಾಗಿದೆ ; (ವಿವರವಾಗಿ ಮಾಹಿತಿ ನೀಡುವುದು)

(ಈ) ಸದರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು ? (ಖಾಯಂ/ಗುತ್ತಿಗೆ/ಇತರೆ ಸಿಬ್ಬಂದಿಗಳ ಹೆಸರು, ಹುದ್ದೆಯ ಪದನಾಮ, ವೇತನ ಶ್ರೇಣಿ ಹಾಗೂ ಮೊಬೈಲ್ ಸಂಖ್ಯೆಯೊಂದಿಗೆ ವಿವರ ನೀಡುವುದು)

## ಭೂ ಒತ್ತುವರಿ/ಕಬಳಿಕೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೦೪ (೧೫೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಒತ್ತುವರಿಯಾಗಿರುವ ಅಥವಾ ಕಬಳಿಕೆಯಾಗಿರುವ ಸರ್ಕಾರಿ ಜಮೀನುಗಳೆಷ್ಟು ; (ವಿಸ್ತೀರ್ಣ ಮತ್ತು ಒತ್ತುವರಿದಾರರ ವಿವರ ನೀಡುವುದು)

(ಆ) ಒತ್ತುವರಿಯಾಗಿರುವ ಜಮೀನುಗಳಲ್ಲಿ ಎಷ್ಟು ಜಮೀನುಗಳನ್ನು ತೆರವುಗೊಳಿಸಲಾಗಿದೆ ; ಇನ್ನೂ ಎಷ್ಟು ಬಾಕಿ ಇದೆ ; ಪೂರ್ತಿ ಒತ್ತುವರಿಯನ್ನು ತೆರವುಗೊಳಿಸಲು ಎಷ್ಟು ದಿನಗಳಾಗುತ್ತದೆ ;

(ಇ) ಒತ್ತುವರಿದಾರರ ಅಥವಾ ಕಬಳಿಕೆದಾರರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ ? (ಪೂರ್ಣ ವಿವರ ನೀಡುವುದು)

## ರಾಜ್ಯದಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧ ನಿಯಮ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೦೫ (೧೫೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪರಿಸರಕ್ಕೆ ಮಾರಕವಾಗಿರುವ ಪ್ಲಾಸ್ಟಿಕ್ ಬಳಕೆಯ ನಿಷೇಧ ನಿಯಮವನ್ನು ರಾಜ್ಯದಲ್ಲಿ ಕಟ್ಟುನಿಟ್ಟಾಗಿ ಜಾರಿಗೆ ತರಲಾಗಿದೆಯೇ ;

(ಆ) ಪ್ಲಾಸ್ಟಿಕ್ ಬಳಕೆಯಿಂದ ಆಗುವ ತೊಂದರೆಗಳ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಇ) ಹೋಟೆಲುಗಳಲ್ಲಿ ಪ್ಲಾಸ್ಟಿಕ್ ಕವರ್‌ಗಳಲ್ಲಿ ಬಿಸಿಬಿಸಿ ತಿಂಡಿ ಊಟದ ಪದಾರ್ಥಗಳನ್ನು ಪ್ಯಾಕ್ ಮಾಡಿಕೊಡುತ್ತಿದ್ದರೂ ಸರ್ಕಾರ ಕ್ರಮ ಕೈಗೊಳ್ಳದಿರಲು ಕಾರಣವೇನು ;

(ಈ) ಸರ್ಕಾರಿ ಡೈರಿಗಳಲ್ಲಿ ಹಾಲು ಮತ್ತು ಮೊಸರನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ನೀಡುತ್ತಿದ್ದು, ನಿರುಪಯುಕ್ತ ಪ್ಲಾಸ್ಟಿಕ್ ಕವರ್‌ಗಳನ್ನು ಕಸದಲ್ಲಿ ಹಾಕುವುದರಿಂದ ಪರಿಸರಕ್ಕೆ ತೊಂದರೆಯಾಗುವುದಿಲ್ಲವೇ ?

## ಸಣ್ಣ ನೀರಾವರಿ ಇಲಾಖೆ ಕಾರ್ಯಕ್ರಮಗಳು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೦೬ (೧೫೧) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸಣ್ಣ ನೀರಾವರಿ ಇಲಾಖೆಯು ಮೂಲಕ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳಾವುವು ;

(ಆ) ಸದರಿ ಕಾರ್ಯಕ್ರಮಗಳಿಗೆ ನಿಗದಿ ಮಾಡಿರುವ ಮತ್ತು ಬಿಡುಗಡೆಯಾಗಿರುವ ಅನುದಾನ ಎಷ್ಟು ; ಖರ್ಚಾಗಿರುವುದೆಷ್ಟು ; (ಕಳೆದ ೨ ವರ್ಷಗಳ ವಿವರ ನೀಡುವುದು)

(ಇ) ಕಾರ್ಯಕ್ರಮಗಳ ಅನುಷ್ಠಾನ ಸಮರ್ಪಕವಾಗಿ ಆಗುತ್ತಿದೆಯೇ ? (ಪ್ರಗತಿಯ ವಿವರ ನೀಡುವುದು)

## ಜುಟ್ಟನಹಳ್ಳಿ ಏತ ನೀರಾವರಿ ಕಾಮಗಾರಿ ವಿವರ

**ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೦೭ (೧೪೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ಜುಟ್ಟನಹಳ್ಳಿ ಹಿರೀಸಾವೆ ಏತ ನೀರಾವರಿ ಯೋಜನೆಯ ಕಾಮಗಾರಿಯ ಟೆಂಡರ್ ಪಡೆದಿರುವ ಗುತ್ತಿಗೆದಾರರು ಯಾರು ; (ಮಾಹಿತಿ ನೀಡುವುದು)

(ಆ) ಸದರಿ ಏತ ನೀರಾವರಿ ನಿರ್ಮಾಣ ಕಾಮಗಾರಿ ಕೈಗೊಂಡಿರುವ ಮಾಹಿತಿ ಹಾಗೂ ಯೋಜನೆಗೆ ನಿಗದಿಪಡಿಸಲಾಗಿರುವ ಅನುದಾನ, ಈಗಾಗಲೇ ಬಿಡುಗಡೆ ಮಾಡಲಾಗಿರುವ ಅನುದಾನ ಮತ್ತು ಇದುವರೆಗೆ ಖರ್ಚಾದ ಅನುದಾನವೆಷ್ಟು ; (ವಿವರಗಳನ್ನು ಒದಗಿಸುವುದು)

(ಇ) ಸದರಿ ಯೋಜನೆಗೆ ಬೇಕಾದ ಭೂಮಿಯನ್ನು ಭೂಸ್ವಾಧೀನ ಮಾಡಿಕೊಳ್ಳುವ ಪ್ರಕ್ರಿಯೆಯು ಯಾವ ಹಂತದಲ್ಲಿದೆ ? (ವಿವರ ನೀಡುವುದು)

## ಕೆರೆಗಳ ಅಭಿವೃದ್ಧಿ ಬಗ್ಗೆ

**ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೦೮ (೧೪೩) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾಸನ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ ಸಣ್ಣ ಕೆರೆಗಳು ಎಷ್ಟು ; (ವಿವರ ನೀಡುವುದು)

(ಆ) ೨೦೧೫–೧೬ ಮತ್ತು ೨೦೧೬–೧೭ನೇ ಸಾಲಿನಲ್ಲಿ ಹಾಸನ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಬರುವ ಸಣ್ಣ ಕೆರೆಗಳ ಹೂಳೆತ್ತುವ ಕಾಮಗಾರಿ ಹಾಗೂ ಇನ್ನಿತರ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ ; (ಕೆರೆವಾರು ಮಾಹಿತಿ ಒದಗಿಸುವುದು)

(ಇ) ಸಣ್ಣ ಕೆರೆಗಳ ಹೂಳೆತ್ತುವ ಕಾಮಗಾರಿ ಹಾಗೂ ಇನ್ನಿತರ ಕಾಮಗಾರಿಗಳನ್ನು ಕೈಗೊಳ್ಳಲು ೨೦೧೬–೧೭ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಅನುದಾನ ಹಾಗೂ ಖರ್ಚಾದ ಅನುದಾನ ಎಷ್ಟು ? (ವಿವರ ಒದಗಿಸುವುದು)

## ಸಾಗುವಳಿ ಪತ್ರ ನೀಡುವಲ್ಲಿನ ವಿಳಂಬದ ಬಗ್ಗೆ

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು):–**

೧೯೯ (೧೮೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಗಳ ಗೊಂದಲಗಳಿಂದ ಅಥವಾ ಪತ್ರ ವ್ಯವಹಾರಗಳ ವಿಳಂಬದಿಂದ ರಾಜ್ಯದಲ್ಲಿ ದಶಕಗಳಿಂದ ಅನಧಿಕೃತ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಜಮೀನಿಗೆ ಹಕ್ಕು ಪತ್ರಗಳನ್ನು ನೀಡದಿರುವ ಎಷ್ಟು ಪ್ರಕರಣಗಳು ಬಾಕಿ ಉಳಿದಿವೆ ; (ಜಿಲ್ಲಾವಾರು ಮತ್ತು ಹೆಕ್ಟೇರ್‌ವಾರು ಜಮೀನುಗಳ ವಿವರ ನೀಡುವುದು)

(ಆ) ಸ್ಥಳೀಯ ಜನ ಪ್ರತಿನಿಧಿಗಳು ಮತ್ತು ಅಧಿಕಾರಿಗಳ ನಿರ್ಲಕ್ಷತನಗಳಿಂದ ಹಕ್ಕು ಪತ್ರಗಳ ಪ್ರಕರಣಗಳು ವಿಲೇಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು ?

## ಪೌರ ಕಾರ್ಮಿಕರಿಗೆ ಏಜೆನ್ಸಿಯವರು ವಂಚನೆ ಮಾಡುವ ಬಗ್ಗೆ

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು):–**

೧೧೦ (೧೮೬) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೊರ ಸಂಪನ್ಮೂಲಗಳಿಂದ ಪೌರ ಕಾರ್ಮಿಕರು, ವಿವಿಧ ದರ್ಜೆಯ ಲಿಪಿಕ ನೌಕರರುಗಳನ್ನು ಸರ್ಕಾರದ ಪಾಲಿಕೆ/ಇಲಾಖೆಗಳು ಪಡೆದು, ಆ ಕಾರ್ಮಿಕರ/ನೌಕರರ ವೇತನ ಭತ್ಯೆಗಳನ್ನು ಏಜೆನ್ಸಿಯವರಿಗೆ ನೀಡುವ, ವ್ಯವಸ್ಥೆಯನ್ನು ದುರುಪಯೋಗಪಡಿಸಿಕೊಂಡು ಪೂರ್ಣ ಪ್ರಮಾಣದ ವೇತನ ಭತ್ಯೆಗಳನ್ನು ಪಾವತಿಸದೆ ಏಜೆನ್ಸಿಯವರು ಕಾರ್ಮಿಕರನ್ನು ವಂಚನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಾರ್ಮಿಕರ ವೇತನ ಭತ್ಯೆಗಳನ್ನು ಏಜೆನ್ಸಿಯವರಿಗೆ ನೀಡುವ ಬದಲು, ಸರ್ಕಾರ, ಪಾಲಿಕೆಗಳೆ ನೇರವಾಗಿ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡುವ ವ್ಯವಸ್ಥೆ ಮಾಡಲು ಸರ್ಕಾರ ಚಿಂತಿಸುವುದೇ ;

(ಇ) ರಾಜ್ಯದಲ್ಲಿರುವ ಕಾರ್ಮಿಕರ ಕಲ್ಯಾಣ ಮಂಡಳಿಗಳು ಎಷ್ಟಿವೆ ; ಅವುಗಳಲ್ಲಿ ಹಾಲಿ ಸಂಗ್ರಹವಾಗಿರುವ ಹಣವೆಷ್ಟು ; ಪ್ರಚಾರವಿಲ್ಲದೆ ಈ ಹಣದ ಸೌಲಭ್ಯಗಳನ್ನು ಪಡೆಯಲು ಬಹುತೇಕ ಕಾರ್ಮಿಕರು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು ?

## ರೇಖಲಗೆರೆ ಫೀಡರ್ ಚಾನೆಲ್ ದುರಸ್ಥಿ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೧ (೨೧೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕಿನ ರೇಖಲಗೆರೆ ಫೀಡರ್ ಚಾನೆಲ್ ಸುಮಾರು ೧೪ ಕಿ.ಮೀ. ಇದ್ದು, ವಿಶೇಷ ಪ್ಯಾಕೇಜ್ ಅಡಿಯಲ್ಲಿ ದುರಸ್ಥಿ ಕಾರ್ಯ ಕೈಗೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ ;

(ಆ) ಇದ್ದಲ್ಲಿ ಸದರಿ ಚಾನೆಲ್ ದುರಸ್ಥಿ ಬಗ್ಗೆ ಈವರೆಗೆ ಕೈಗೊಂಡಿರುವ ಕ್ರಮಗಳೇನು ;

(ಇ) ಸದರಿ ಚಾನೆಲ್‌ನಿಂದ ಎಷ್ಟು ಕೆರೆಗಳಿಗೆ ನೀರು ತುಂಬಿಸಲು ಅನುಕೂಲವಾಗುತ್ತದೆ ?

## ಅಂತರ್ ಜಲಮಟ್ಟ ಹೆಚ್ಚಿಸುವ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೨ (೨೧೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕಿನ ತಳಕು ಮತ್ತು ನಾಯಕನ ಹಟ್ಟಿ ಹೋಬಳಿಗಳಲ್ಲಿ ಅಂತರ್ ಜಲಮಟ್ಟ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಅಂತರ್‌ಜಲ ಮಟ್ಟವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ನಮೂನೆ ೫೩ರಡಿ ಅಕ್ರಮ–ಸಕ್ರಮ ಅರ್ಜಿಗಳ ವಿಳಂಬ ವಿಲೇವಾರಿ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೩ (೯೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಮೂನೆ–೫೩ರಡಿ ಅಕ್ರಮ–ಸಕ್ರಮ ಯೋಜನೆಯಡಿ ಸ್ವೀಕೃತವಾದ ಅರ್ಜಿಗಳ ಸಂಖ್ಯೆ ಎಷ್ಟು ;

(ಆ) ಇದುವರೆಗೂ ಒಟ್ಟು ಎಷ್ಟು ಪ್ರಕರಣಗಳಲ್ಲಿ ಅಕ್ರಮ–ಸಕ್ರಮ ಸಾಗುವಳಿ ಚೀಟಿ ನೀಡಲಾಗಿದೆ ; ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ; ವಿಳಂಬಕ್ಕೆ ಕಾರಣಗಳೇನು ;

(ಇ) ಅಕ್ರಮ–ಸಕ್ರಮ ತನಿಖೆಗೆ ಬಾಕಿ ಇರುವ ತನಿಖೆಯ ಹಂತದಲ್ಲಿರುವ ಪ್ರಕರಣಗಳ ಸಂಖ್ಯೆ ಎಷ್ಟು ; ಬಾಕಿ ಇರಲು ಮುಖ್ಯ ಕಾರಣಗಳೇನು;

(ಈ) ಅಕ್ರಮ–ಸಕ್ರಮ ಸಮಿತಿಯಲ್ಲಿ ಅನುಮೋದನೆಗೊಂಡ ಪ್ರಕರಣಗಳಲ್ಲಿ ಸಾಗುವಳಿ ಚೀಟಿ ವಿತರಿಸಲು ಬಾಕಿ ಇರುವ ಪ್ರಕರಣಗಳೆಷ್ಟು ; ವಿಳಂಬಕ್ಕೆ ಕಾರಣಗಳೇನು ;

(ಉ) ಅಕ್ರಮ–ಸಕ್ರಮ ಯೋಜನೆಯಡಿ ಸಲ್ಲಿಕೆಯಾಗಿರುವ ಅರ್ಜಿಗಳಲ್ಲಿ ಡೀಮ್ಡ್ ಫಾರೆಸ್ಟ್, ಸಿಎನ್‌ಡಿ, ಗೋಮಾಳ ಗೇರು ಲೀಸ್ ಪ್ರಕರಣಗಳೆಷ್ಟು ;

(ಊ) ಕರ್ನಾಟಕ ಭೂ ಕಂದಾಯ ಕಾಯ್ದೆಯಂತೆ, ಹಕ್ಕುಪತ್ರ/ದರ್ಖಾಸ್ತು ಮಂಜೂರಾತಿ ಆದೇಶ (ಸಾಗುವಳಿ ಚೀಟಿ) ನೀಡಿದ ನಂತರ ಅರಣ್ಯ ಒತ್ತುವರಿ ಮುಂತಾದ ಕಾರಣ ನೀಡಿ ಮೇಲ್ಮನವಿ ಸಲ್ಲಿಸಿ ರೈತರಿಗೆ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ರೈತರ ಹಿತ ಕಾಪಾಡುವ ಕುರಿತು ಸರ್ಕಾರದ ನಿಲುವೇನು ; ತೊಂದರೆ ನಿವಾರಣೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?

## ಮೀನುಗಾರಿಕಾ ಇಲಾಖೆಯಲ್ಲಿನ ಸೌಲಭ್ಯ/ಯೋಜನೆಗಳ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೪ (೯೫) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೀನುಗಾರಿಕೆ ಇಲಾಖೆಯಲ್ಲಿನ ಫಲಾನುಭವಿ ಆಧಾರಿತ ಯೋಜನೆಗಳಾವುವು ; ಅರ್ಹತಾ ಮಾನದಂಡಗಳೇನು ; ಕಳೆದ ೫ ವರ್ಷಗಳಲ್ಲಿ ಎಷ್ಟು ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲಾಗಿದೆ;

(ಆ) ಕಳೆದ ೫ ವರ್ಷಗಳಲ್ಲಿ ಮೀನುಗಾರಿಕಾ ಇಲಾಖೆಯ ವಿವಿಧ ಯೋಜನೆಗಳಿಗೆ ಮಂಜೂರಾದ/ಖರ್ಚಾದ ಅನುದಾನ ಎಷ್ಟು ; (ಜಿಲ್ಲಾವಾರು ವರ್ಷವಾರು ವಿವರ ನೀಡುವುದು)

(ಇ) ಕಳೆದ ೫ ವರ್ಷಗಳಲ್ಲಿ ಮೀನುಗಾರಿಕೆ ವೇಳೆ ಮೃತಪಟ್ಟವರ ಸಂಖ್ಯೆ ಎಷ್ಟು ; ಎಷ್ಟು ಪ್ರಕರಣಗಳಲ್ಲಿ ಪರಿಹಾರ ನೀಡಲಾಗಿದೆ; ಬಾಕಿ ಇರುವ ಪ್ರಕರಣಗಳೆಷ್ಟು ;

(ಈ) ಕಳೆದ ೩ ವರ್ಷಗಳಲ್ಲಿ ಅವಘಡಕ್ಕೆ ಈಡಾದ ದೋಣಿಗಳ ಸಂಖ್ಯೆ ಎಷ್ಟು ; ಎಷ್ಟು ಪ್ರಕರಣಗಳಲ್ಲಿ ಪರಿಹಾರ ನೀಡಲಾಗಿದೆ ; ಬಾಕಿ ಇರುವ ಪ್ರಕರಣಗಳೆಷ್ಟು ? (ವಿವರ ನೀಡುವುದು)

## ಬೆಳೆ ಹಾನಿ ಪರಿಹಾರ ಅರ್ಜಿ ಸಲ್ಲಿಕೆ ವಿಲೇವಾರಿಯಲ್ಲಿನ ಗೊಂದಲದ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೫ (೯೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಬೆಳೆ ಹಾನಿ ಪರಿಹಾರ ಅರ್ಜಿ ಸಲ್ಲಿಕೆ ಮತ್ತು ಪರಿಹಾರ ವಿತರಣೆ ಪ್ರಕ್ರಿಯೆಯು ಗೊಂದಲಮಯವಾಗಿರುವುದು ನಿಜವೇ;

(ಆ) ರಾಜ್ಯದಲ್ಲಿ ಇದುವರೆಗೂ ಆನ್‌ಲೈನ್ ಮೂಲಕ ಬೆಳೆ ಪರಿಹಾರ ಕೋರಿ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು ; ಇದುವರೆಗೂ ಒಟ್ಟು ಎಷ್ಟು ಅರ್ಜಿಗಳಿಗೆ ಪರಿಹಾರ ಮಂಜೂರು ಮಾಡಲಾಗಿದೆ; ಪರಿಶೀಲನೆಗೆ ಬಾಕಿಯಿರುವ ಅರ್ಜಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)

(ಇ) ಈ ಹಿಂದೆ ಬೆಳೆ ಪರಿಹಾರ ಮೊತ್ತವನ್ನು ಅಧಿಕಾರಿಗಳ ನಿರ್ಲಕ್ಷ್ಯದಿಂದ ಅನ್ಯ ರಾಜ್ಯದ ರೈತರ ಖಾತೆಗೆ ಜಮೆಯಾಗಿರುವುದು ನಿಜವೇ ; ಈ ಬಗ್ಗೆ ತನಿಖಾ ಸಮಿತಿಯ ವರದಿಯ ಮುಖ್ಯ ಅಂಶಗಳೇನು ;

(ಈ) ಬೆಳೆ ಪರಿಹಾರ ಅರ್ಜಿ ಸಲ್ಲಿಕೆಗೆ ರೈತರು ಸಂಕಷ್ಟಪಡುವುದನ್ನು ತಡೆಯಲು ಹಾಗೂ ಕಾಲಮಿತಿಯಲ್ಲಿ ಅರ್ಜಿ ಪರಿಶೀಲನೆ ನಡೆಸಿ ಪರಿಹಾರ ಮೊತ್ತವನ್ನು ನೇರವಾಗಿ ಅರ್ಹ ರೈತರ ಖಾತೆಗೆ ಜಮಾ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

## ಸೌಭಾಗ್ಯ ಸಂಜೀವಿನಿ ಮತ್ತು ಪಶ್ಚಿಮ ವಾಹಿನಿ ಯೋಜನೆ ಅನುಷ್ಠಾನಗೊಳಿಸುವ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೬ (೯೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೩–೧೪ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ, ಕರಾವಳಿ ಪ್ರದೇಶಕ್ಕೆ "ಸೌಭಾಗ್ಯ ಸಂಜೀವಿನಿ" ಯೋಜನೆಯ ಶಕ್ಯತಾ ವರದಿ ತಯಾರಿಸಲಾಗಿದೆಯೇ ; ವರದಿಯ ಮುಖ್ಯಾಂಶಗಳೇನು ; ವರದಿ ತಯಾರಿಕೆಗೆ ವೆಚ್ಚವಾದ ಅನುದಾನ ಎಷ್ಟು ; ಯಾವ ಸಂಸ್ಥೆಯಿಂದ ವರದಿ ತಯಾರಿಸಲಾಗಿದೆ ;

(ಆ) ಕರಾವಳಿ ಭಾಗದಲ್ಲಿನ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗಾಗಿ " ಸೌಭಾಗ್ಯ ಸಂಜೀವಿನಿ" ಮತ್ತು 'ಪಶ್ಚಿಮ ವಾಹಿನಿ' ಯೋಜನೆಯ ಅನುಷ್ಠಾನದ ಕುರಿತು ಸರ್ಕಾರದ ನಿಲುವೇನು ; ಸದರಿ ಯೋಜನೆಯ ಅಂದಾಜು ಮತ್ತು ಪ್ರಮುಖ ಉದ್ದೇಶ ವ್ಯಾಪ್ತಿಯೇನು;

(ಇ) ಈ ಎರಡು ಯೋಜನೆಗಳ ಪ್ರಸ್ತಾವನೆ ಯಾವ ಹಂತದಲ್ಲಿದೆ ;

(ಈ) ಸೌಭಾಗ್ಯ ಸಂಜೀವಿನಿ ಮತ್ತು ಪಶ್ಚಿಮ ವಾಹಿನಿ ಯೋಜನೆಯನ್ನು ಯಾವಾಗ, ಯಾವ ಕಾಲಮಿತಿಯಲ್ಲಿ ಅನುಷ್ಠಾನ ಮಾಡಲಾಗುವುದು ? (ವಿವರ ನೀಡುವುದು)

## ೯೪ಸಿ–೯೪ಸಿಸಿ ಯೋಜನೆ ಅನುಷ್ಠಾನದ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೭ (೯೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೯೪ಸಿ ಯೋಜನೆ ಜಾರಿಗೆ ಬಂದು ೨ ವರ್ಷ ಸಂದರೂ ಹಕ್ಕುಪತ್ರ ವಿತರಿಸದೇ ವಿಳಂಬ ನೀತಿ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ರಾಜ್ಯದಲ್ಲಿ ೯೪ ಸಿ ಮತ್ತು ೯೪ ಸಿಸಿ ಯೋಜನೆಯಡಿ ಸ್ವೀಕೃತವಾದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು, ವಿಧಾನಸಭಾವಾರು ವಿವರದೊಂದಿಗೆ ಉಡುಪಿ ಜಿಲ್ಲೆಯ ಗ್ರಾಮವಾರು ವಿವರ ನೀಡುವುದು)

(ಆ) ೯೪ ಸಿ ಹಕ್ಕುಪತ್ರಕ್ಕೆ ಪಾವತಿಸಬೇಕಾದ ಶುಲ್ಕದ ನಿಗಧಿಗೆ ಇರುವ ನಿಯಮಗಳೇನು ; ಸರ್ಕಾರದ ಹೊಸ ಭರವಸೆಯಂತೆ ಶುಲ್ಕ ಕಡಿತಗೊಳಿಸುವ ಪ್ರಸ್ತಾವನೆ ಆದೇಶ ಹೊರಡಿಸದೇ ಇರುವುದಕ್ಕೆ ಕಾರಣಗಳೇನು ; ಯಾವಾಗ ಹೊರಡಿಸಲಾಗುವುದು ;

(ಇ) ೯೪ ಸಿ ಮತ್ತು ೯೪ ಸಿಸಿ ಯೋಜನೆಯಡಿ ಮಂಜೂರಾದ ನಂತರ ಹಕ್ಕುಪತ್ರ ವಿತರಣೆ ಮಾಡಿದ ಮತ್ತು ಹಕ್ಕುಪತ್ರ ನೀಡಲು ಬಾಕಿಯಿರುವ ಅರ್ಜಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು, ವಿಧಾನಸಭಾವಾರು ವಿವರದೊಂದಿಗೆ ಉಡುಪಿ ಜಿಲ್ಲೆಯ ಗ್ರಾಮವಾರು ವಿವರ ನೀಡುವುದು)

(ಈ) ೯೪ ಸಿ ಮತ್ತು ೯೪ ಸಿಸಿ ಯೋಜನೆಯಡಿ ತಿರಸ್ಕೃತವಾದ ಹಾಗೂ ತನಿಖೆಗೆ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು, ವಿಧಾನಸಭಾವಾರು ವಿವರದೊಂದಿಗೆ ಉಡುಪಿ ಜಿಲ್ಲೆಯ ಗ್ರಾಮವಾರು ವಿವರ ನೀಡುವುದು)

(ಉ) ೯೪ ಸಿ ಮತ್ತು ೯೪ ಸಿಸಿ ಯಡಿ ಸಿ.ಆರ್.ಝಡ್., ಕುಮ್ಕಿ ಗೋಮಾಳ, ಗೇರುಲೀಸ್, ಸಿ.ಎನ್.ಡಿ., ಡೀಮ್ಡ್ ಫಾರೆಸ್ಟ್ ವ್ಯಾಪ್ತಿಯಲ್ಲಿ ವಾಸವಿರುವ ಬಡವರಿಗೆ ಹಕ್ಕುಪತ್ರ ವಿತರಿಸಲು ಇರುವ ತೊಡಕುಗಳೇನು ; ಈ ವ್ಯಾಪ್ತಿಗೆ ಒಳಪಡುವ ಒಟ್ಟು ಪ್ರಕರಣಗಳೆಷ್ಟು ; ಡೀಮ್ಡ್ ಫಾರೆಸ್ಟ್ ಗೋಮಾಳ ಸಹಿತ ಅಡೆತಡೆ ವಿರಹಿತ ಪಡಿಸಿ ಹಕ್ಕುಪತ್ರ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಊ) ೯೪ ಸಿ ಮತ್ತು ೯೪ ಸಿಸಿ ಯೋಜನೆಯಡಿ ಸ್ವೀಕೃತ ಅರ್ಜಿಗಳ ವಿಲೇವಾರಿಯಲ್ಲಿ ಹಕ್ಕುಪತ್ರ ವಿತರಿಸುವಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳಲಿದೆ ;

(ಋ) ೯೪ ಸಿ ಮತ್ತು ೯೪ ಸಿಸಿ ಯೋಜನೆಯಡಿ ಎಲ್ಲಾ ಅಡೆತಡೆಗಳನ್ನು ನಿವಾರಿಸಿ ಬಡವರಿಗೆ ಕಾಲಿಮಿತಿಯಲ್ಲಿ ಹಕ್ಕುಪತ್ರ ನೀಡುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ? (ಸಂಪೂರ್ಣ ವಿವರ ನೀಡುವುದು)

## ಭೂ ಸ್ವಾಧೀನ ಪಡಿಸಿಕೊಂಡ ರೈತರ ಜಮೀನಿಗೆ ಪರಿಹಾರ

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೮ (೨೩೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ರಾಜ್ಯದ ರೈತರಿಂದ ಭೂ ಸ್ವಾಧೀನಪಡಿಸಿಕೊಂಡ ಪ್ರಕರಣಗಳಲ್ಲಿ ಬಾಕಿ ಉಳಿಸಿಕೊಂಡಿರುವ ಪರಿಹಾರದ ಮೊತ್ತವೆಷ್ಟು ;

(ಆ) ಸರ್ಕಾರದ ಮಟ್ಟದಲ್ಲಿ ಅಥವಾ ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಭೂ ಸ್ವಾಧೀನ ಪರಿಹಾರ ಪ್ರಕರಣಗಳ ಸಂಖ್ಯೆ ಎಷ್ಟು ;

(ಇ) ಭೂ ಸ್ವಾಧೀನ ಪರಿಹಾರ ಬಾಕಿ ಉಳಿದಿರುವುದನ್ನು ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೆ ?

## ಕೆರೆ ಅಭಿವೃದ್ಧಿ ಕುರಿತು

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೯ (೯೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಸಣ್ಣ ನೀರಾವರಿ ಇಲಾಖೆಯಡಿಯಲ್ಲಿ ಬರುವ ಕೆರೆಗಳ ಸಂಖ್ಯೆ ಎಷ್ಟು ;

(ಆ) ಬಳ್ಳಾರಿ ಜಿಲ್ಲೆಯಲ್ಲಿ ಕಳೆದ ೫ ವರ್ಷಗಳ ಅವಧಿಯಲ್ಲಿ ರಾಜ್ಯದ ಕೆರೆ ಪುನಃಶ್ಚೇತನ, ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒದಗಿಸಿರುವ ಅನುದಾನ ಎಷ್ಟು ;

(ಇ) ಈ ನಿಟ್ಟಿನಲ್ಲಿ ಅಭಿವೃದ್ಧಿಪಡಿಸಲಾಗಿರುವ ಕೆರೆಗಳು ಯಾವುವು ;

(ಈ) ಇದೇ ಅವಧಿಯಲ್ಲಿ ಅಕ್ರಮವಾಗಿ ಕೆರೆಗಳನ್ನು ಒತ್ತುವರಿ ಮಾಡಿಕೊಂಡಿರುವ ಪ್ರಕರಣಗಳ ಸಂಖ್ಯೆಯೆಷ್ಟು ; ಒತ್ತುವರಿದಾರರ ಮೇಲೆ ಕೈಗೊಂಡಿರುವ ಕ್ರಮಗಳೇನು ?

## ಮದ್ದೂರು ತಾಲ್ಲೂಕು ಮತ್ತು ಮಳವಳ್ಳಿ ತಾಲ್ಲೂಕಿನ ಶಿಂಷಾನದಿಯ ನೀರಾವರಿ ಯೋಜನೆಗಳ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) :–**

೧೨೦ (೧೩೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆ, ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕಿನ ಶಿಂಷಾ ನದಿಯಿಂದ–ಕೆರೆ ನಾಲಾ ಬಯಲಿಗೆ (Tey Land) ನೀರುಣಿಸಲು ಎಷ್ಟು ನೀರಾವರಿ ಯೋಜನೆಗಳನ್ನು ಈವರೆವಿಗೂ ಮಂಜೂರು ಮಾಡಲಾಗಿದೆ ;

(ಆ) ಈ ಯೋಜನೆಗಳಲ್ಲಿ ಎಷ್ಟು ಪೂರ್ಣಗೊಂಡಿವೆ ; ಅಪೂರ್ಣಗೊಂಡಿರುವ ಏತ ನೀರಾವರಿ ಸಂಖ್ಯೆ ಎಷ್ಟು ;

(ಇ) ಎಲ್ಲಾ ಏತ ನೀರಾವರಿಗಳಿಗೆ ಮಂಜೂರಾಗಿರುವ ಹಣವೆಷ್ಟು ; ಎಷ್ಟು ಖರ್ಚಾಗಿದೆ ;

(ಈ) ಪೂರ್ಣಗೊಂಡಿರುವ ಯೋಜನೆಗಳಲ್ಲಿ ಪ್ರಸ್ತುತ ಚಾಲನೆಯಲ್ಲಿರುವ ಯೋಜನೆಗಳೆಷ್ಟು ;

(ಉ) ಚಾಲನೆಯಲ್ಲಿರುವ ಯೋಜನೆಗಳನ್ನು ಪುನಃ ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಊ) ಅಪೂರ್ಣಗೊಂಡಿರುವ ಯೋಜನೆಗಳನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಲಾಗುವುದು ?

## ಮದ್ದೂರು ತಾಲ್ಲೂಕು ಕೌಡ್ಲೆ ಗ್ರಾಮದ ನಾಡ ಕಛೇರಿ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) :–**

೧೨೧ (೧೯೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು–ಕೌಡ್ಲೆ ಗ್ರಾಮದ ನಾಡ ಕಛೇರಿಯು ಎಂದಿನಿಂದ ಕಾರ್ಯನಿರ್ವಹಿಸುತ್ತಿದೆ ;

(ಆ) ಕೊಪ್ಪ ನಾಡ ಕಛೇರಿಗೆ ಹತ್ತಿರ ಇರುವ ಕೆಲವು ಗ್ರಾಮಗಳನ್ನು ಅವೈಜ್ಞಾನಿಕವಾಗಿ ದೂರ ಇರುವಂತಹ ಕೌಡ್ಲೆ–ನಾಡ ಕಛೇರಿಗೆ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕೌಡ್ಲೆ ನಾಡ ಕಛೇರಿಯಲ್ಲಿ ಖಾಯಂ ಸಿಬ್ಬಂದಿಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಕೊಪ್ಪ ಗ್ರಾಮಕ್ಕೆ ಹತ್ತಿರ ಇರುವ ಆಬಲವಾಡಿ, ಹವ್ವರಳ್ಳಿ, ಹರಳಕೆರೆ, ಸೋಮನಹಳ್ಳಿ, ಹೊಸಗಾವಿ, ಚಿಕ್ಕಹಸಗಾವಿ ಮಲ್ಲಿಗೆರೆ, ತರಿಕೆರೆ ಕಾಲೋನಿ, ಹಳಹಳ್ಳಿ, ಮೂಡ್ಯ ಈ ಗ್ರಾಮಗಳನ್ನು ಕೌಡ್ಲೆ ನಾಡ ಕಛೇರಿಗೆ ಸೇರಿಸಿರುವ ಬಗ್ಗೆ ಮತ್ತು ಇದನ್ನು ಕೊಪ್ಪ ೨ನೇ ವರ್ಗಕ್ಕೆ ಸೇರಿಸುವ ಬಗ್ಗೆ, ತಹಶೀಲ್ದಾರ್, ಮದ್ದೂರು ಜಿಲ್ಲಾಧಿಕಾರಿಗಳಿಗೆ ಜನರು ಮನವಿ ಸಲ್ಲಿಸಿದ್ದು ಈ ಬಗ್ಗೆ ಏನು ಕ್ರಮ ವಹಿಸಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಇಲ್ಲವಾದಲ್ಲಿ, ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಮದ್ದೂರು ತಾಲ್ಲೂಕು ಕೊಪ್ಪ ಉಪವಿಭಾಗದ ವಿ.ಸಿ. ನಾಲೆಯ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) :–**

೧೨೨ (೧೯೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮದ್ದೂರು ತಾಲ್ಲೂಕು ನಂ.೬ ವಿ.ಸಿ. ಉಪವಿಭಾಗ ಕೊಪ್ಪ ಇದರ ವ್ಯಾಪ್ತಿಯಲ್ಲಿ ಬರುವ ಕೊನೆಭಾಗದ ಕುಂಠಿತ ಅಚ್ಚುಕಟ್ಟು ಪ್ರದೇಶಗಳಿಗೆ ಹಾಗೂ ಕೆರೆಕಟ್ಟೆ ಜಾನುವಾರುಗಳಿಗೆ ಶಾಶ್ವತವಾಗಿ ನೀರೊದಗಿಸುವ ಬಗ್ಗೆ ಸಾರ್ವಜನಿಕರಿಂದ ಮನವಿ ಬಂದಿದೆಯೇ;

(ಆ) ವಿ.ಸಿ. ನಾಲಾ ನಂ.೬ ವಿಭಾಗದ ವ್ಯಾಪ್ತಿಗೆ ಬರುವ ಕುಂಠಿತ ಅಚ್ಚುಕಟ್ಟು ನೀರಾವರಿ ಜಮೀನುಗಳ ಪ್ರದೇಶ ಎಷ್ಟು ; (ಗ್ರಾಮವಾರು ವಿವರವನ್ನು ನೀಡುವುದು)

(ಇ) ವಿ.ಸಿ. ನಾಲಾ ನಂ.೬ ಕೊಪ್ಪ ವಿಭಾಗದ ವ್ಯಾಪ್ತಿಗೆ ಬರುವ ಕುಂಠಿತ ಅಚ್ಚುಕಟ್ಟು ಪ್ರದೇಶಗಳ ಶಾಶ್ವತ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ಸರ್ಕಾರ ಕೈಗೊಂಡ ಕ್ರಮವೇನು ;

(ಈ) ಕೊನೆ ಭಾಗದ ನಾಲಾ ವ್ಯಾಪ್ತಿಗೆ ಸರಿಯಾಗಿ ನೀರು ಬಾರದೆ ಜನರು ಯಾವ ಬೆಳೆಯನ್ನು ಬೆಳೆಯದೆ ಇರುವುದರಿಂದ ಶಾಶ್ವತವಾದ ನೀರಾವರಿ ಕಾಮಗಾರಿ ಕೈಗೊಳ್ಳಲು–ಕಾಮಗಾರಿಗಳನ್ನು ಮಂಜೂರು ಮಾಡಲು ಸರ್ಕಾರ ಕ್ರಮವಹಿಸುವುದೆ ?

## ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಬೋಳಾರೆ ಅಣೆಕಟ್ಟು ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) :–**

೧೨೩ (೧೮೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿ, ಬೋಳಾರೆ ಗ್ರಾಮದಲ್ಲಿನ ಕೆರೆಯ ಅಣೆಕಟ್ಟು ಕಟ್ಟಲು ತಗುಲಿದ ವೆಚ್ಚವೆಷ್ಟು ; (ಇದರ ಬಗ್ಗೆ ದೃಢೀಕರಿಸಿದ ದಾಖಲಾತಿ ನೀಡುವುದು)

(ಆ) ಸದರಿ ಕಾಮಗಾರಿ ಆರಂಭವಾದ ವರ್ಷ ಯಾವುದು ; ಕಾಮಗಾರಿ ಮುಕ್ತಾಯವಾದದ್ದು ಯಾವಾಗ ;

(ಇ) ಈ ಕೆರೆಯ ವಿಸ್ತೀರ್ಣ ಮತ್ತು ನೀರಿನ ಸಂಗ್ರಹ ಎಷ್ಟು ; (ಇದರ ಬಗ್ಗೆ ದಾಖಲಾತಿ ದೃಢೀಕೃತ ಪ್ರತಿ ನೀಡುವುದು)

(ಈ) ಸದರಿ ಕೆರೆಯ ಅಚ್ಚುಕಟ್ಟಿನಿಂದ ಕೊಪ್ಪ ಹೋಬಳಿ ವ್ಯಾಪ್ತಿಯ ಎಷ್ಟು ಜಮೀನು ನೀರಾವರಿ ಅಚ್ಚುಕಟ್ಟಿಗೆ ಸೇರಿದೆ ;

(ಉ) ನಾಗಮಂಗಲ ತಾಲ್ಲೂಕು, ದೇವಲಾಪುರ ಹೋಬಳಿ, ಕುಡುಗಬಾಳು ಗ್ರಾಮವು ಈ ನೀರಾವರಿ ವ್ಯಾಪ್ತಿಗೆ ಸೇರಿದೆಯೇ; ಸೇರಿದ್ದರೆ, ವಿಸ್ತೀರ್ಣವೆಷ್ಟು ; (ದೃಢೀಕೃತ ಮಾಹಿತಿ ನೀಡುವುದು)

(ಊ) ಸದರಿ ಅಣೆಕಟ್ಟೆಯ ಬಗ್ಗೆ ಮಾಹಿತಿಯು ಮಂಡ್ಯ ಮತ್ತು ಕೆರೆಗೋಡು ಕಾ.ನಿ.ಗ. ವಿಭಾಗದಲ್ಲಿ ದಾಖಲೆಗಳು ಇರುವುದು ಕಂಡು ಬಂದಿದೆಯೇ ? (ವಿವರ ನೀಡುವುದು)

## ಮಹದಾಯಿ ಹೋರಾಟದಲ್ಲಿ ಆಸ್ತಿ ಕಳೆದುಕೊಂಡ ದೌರ್ಜನ್ಯಕ್ಕೊಳಗಾದ ಅಮಾಯಕ ರೈತರಿಗೆ ಪರಿಹಾರ ನೀಡದೆ ಇರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೨೪ (೧೪೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಹದಾಯಿ ನ್ಯಾಯಾಧೀಕರಣದ ತೀರ್ಪು ವಿರೋಧಿಸಿ ನವಲಗುಂದ ತಾಲ್ಲೂಕಿನ ನಡೆದ ಹೋರಾಟದ ವೇಳೆ ಆಸ್ತಿ ಪಾಸ್ತಿ ನಾಶವಾಗಿ ನಷ್ಟ ಹೊಂದಿದ ರೈತರಿಗೆ ಹಾಗೂ ಪೊಲೀಸರ ದೌರ್ಜನ್ಯದಿಂದ ಹಲ್ಲೆಗೊಳಗಾದ ಅಮಾಯಕ ರೈತರಿಗೆ ಈವರೆಗೆ ಯಾವುದೇ ಪರಿಹಾರ ಸಿಗದೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸದರಿ ಹೋರಾಟದ ವೇಳೆ ಎಷ್ಟು ಜನರು ಹಾಗೂ ಎಷ್ಟು ಪ್ರಮಾಣದ ಆಸ್ತಿ ನಷ್ಟವಾಗಿದೆ ; ಒಟ್ಟು ಎಷ್ಟು ಜನ ರೈತರ ಮೇಲೆ ಹಲ್ಲೆಯಾಗಿದೆ ; (ವಿವರ ನೀಡುವುದು)

(ಇ) ಮಾನವ ಹಕ್ಕುಗಳ ಆಯೋಗದ ನಿರ್ದೇಶನದ ಸಮೀಕ್ಷಾ ವರದಿಯ ಮೇರೆಗೆ ಹಲ್ಲೆಗೊಳಗಾಗಿರುವ ಅಮಾಯಕರಿಗೆ ನಿಗಧಿಪಡಿಸಲಾದ ಪರಿಹಾರಧನವೆಷ್ಟು ; ಅಮಾಯಕರ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಈ) ಇದುವರೆವಿಗೂ ಪರಿಹಾರ ನೀಡದೆ ಇರುವುದಕ್ಕೆ ಕಾರಣಗಳೇನು; ಇವರಿಗೆ ಯಾವ ಕಾಲಮಿತಿಯಲ್ಲಿ ಪರಿಹಾರ ವಿತರಿಸಲಾಗುವುದು? (ವಿವರ ನೀಡುವುದು)

## ಕಾಳ್ಗಿಚ್ಚಿನಿಂದ ಆಹುತಿಯಾದ ಅರಣ್ಯ ಪ್ರದೇಶವನ್ನು ಪುನಃಶ್ಚೇತನಗೊಳಿಸುವ ವಿಚಾರ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೨೫ (೧೪೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಪ್ರತಿ ವರ್ಷ ನೂರಾರು ಎಕರೆ ಅರಣ್ಯ ಪ್ರದೇಶ ಕಾಳ್ಗಿಚ್ಚಿಗೆ ಆಹುತಿಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ರೀತಿಯ ಕಾಳ್ಗಿಚ್ಚಿಗೆ ಸರ್ಕಾರವು ಗುರುತಿಸಿರುವ ಮೂಲ ಕಾರಣಗಳೇನು ; ವನ್ಯಮೃಗಗಳನ್ನು ಹಾಗೂ ಅರಣ್ಯ ಪ್ರದೇಶವನ್ನು ರಕ್ಷಿಸುವ ನಿಟ್ಟಿನಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮಗಳೇನು ;

(ಇ) ಕಾಳ್ಗಿಚ್ಚಿನಿಂದ ವ್ಯವಸ್ಥಿತ ಜಾಲವಿದ್ದು, ಸ್ವಹಿತಾಸಕ್ತಿಯಿಂದ ಅರಣ್ಯವನ್ನು ಬೆಂಕಿಗೆ ಆಹುತಿ ಮಾಡುತ್ತಿದ್ದಾರೆಂದು ಸಾರ್ವಜನಿಕರು ಸಂದೇಹ ವ್ಯಕ್ತಪಡಿಸುತ್ತಿರುವುದು ನಿಜವೆ ;

(ಈ) ಹಾಗಿದ್ದಲ್ಲಿ, ಸದರಿ ಕಾಡುಗಳ್ಳರಿಂದ ಅರಣ್ಯ ಸಂಪತ್ತು ವನ್ಯಜೀವಿಗಳು ನಾಶವಾಗದಂತೆ ತಡೆಯಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು ;

(ಉ) ೨೦೧೫–೧೬, ೨೦೧೬–೧೭ರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಎಕರೆ ಅರಣ್ಯ ಪ್ರದೇಶ ಅಗ್ನಿಗೆ ಆಹುತಿಯಾಗಿದೆ ; ಕಾಳ್ಗಿಚ್ಚಿಗೆ ಆಹುತಿಯಾದ ಅರಣ್ಯ ಪ್ರದೇಶವನ್ನು ಪುನಃಶ್ಚೇತನಗೊಳಿಸಲು ಸರ್ಕಾರವು ಹಮ್ಮಿಕೊಂಡ ಕಾರ್ಯಕ್ರಮಗಳೇನು ; ಈವರೆಗೆ ರಾಜ್ಯದಲ್ಲಿ ಎಷ್ಟು ಪ್ರಮಾಣದ ಅರಣ್ಯ ಪ್ರದೇಶವನ್ನು ಪುನಃಶ್ಚೇತನಗೊಳಿಸಲಾಗಿದೆ ? (ಜಿಲ್ಲಾವಾರು ವಿವರ ನೀಡುವುದು)

## ಸರ್ಕಾರದ ಅವೈಜ್ಞಾನಿಕ ನಿಯಮ ಮತ್ತು ಯೋಜನೆಗಳಿಂದಾಗಿ ನೇಕಾರರ ಬಟ್ಟೆ ಖರೀದಿಸದೆ ನೇಕಾರರು ಬೀದಿ ಪಾಲಾಗುತ್ತಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೨೬ (೧೪೬) ಮಾನ್ಯ ಜವಳಿ ಹಾಗೂ ಮುಜರಾಯಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸರ್ಕಾರದ ಅವೈಜ್ಞಾನಿಕ ನಿಯಮ ಮತ್ತು ಯೋಜನೆಗಳ ನೀತಿಯಿಂದಾಗಿ ನೇಕಾರರಿಂದ ಬಟ್ಟೆ ಖರೀದಿಸದೆ ಇರುವುದರಿಂದ ನೇಕಾರರು ಬೀದಿ ಪಾಲಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸಂಕಷ್ಟದ ಪರಿಸ್ಥಿತಿಯಲ್ಲಿರುವ ನೇಕಾರ ವರ್ಗದವರಿಗೆ ಇರುವ ಯೋಜನೆಗಳನ್ನು ಬದಲಾಯಿಸಿ ಸಹಾಯ ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು ; ನೇಕಾರರಿಗೆ ಮತ್ತು ನೇಕಾರ ಅಭಿವೃದ್ಧಿಗೆ ರಾಜ್ಯ ಸರ್ಕಾರವು ಕೈಗೊಂಡ ಮೂಲಭೂತ ಸೌಲಭ್ಯಗಳೇನು ;

(ಇ) ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ, ಕೈಮಗ್ಗ ಅಭಿವೃದ್ಧಿ ಮತ್ತು ಕಾವೇರಿ ಹ್ಯಾಂಡ್ ಲೂಮ್ ನಿಗಮಗಳ ಅನುದಾನವು ಬಂಡವಾಳಶಾಹಿಗಳ ಪಾಲಾಗುತ್ತಿರುವುದು ನಿಜವೆ ; (ವಿವರ ನೀಡುವುದು)

(ಈ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಬೇಡಿಕೆ ಇರುವ ಬಟ್ಟೆಗಳನ್ನು ಓಪನ್ ಟೆಂಡರ್ ಮೂಲಕ ಖರೀದಿ ಮಾಡುತ್ತಿರುವುದು ನೇಕಾರರನ್ನು ಆರ್ಥಿಕವಾಗಿ ಹಿಂದುಳಿಯುವಂತೆ ಮಾಡಿರುವುದು ಸರ್ಕಾರ ಗಮನಿಸಿದೆಯೇ ; ಹಾಗಿದ್ದಲ್ಲಿ, ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಉ) ನೇಕಾರರಿಂದಲೇ ನೇರವಾಗಿ ಬಟ್ಟೆ ಖರೀದಿಸುವ ಕುರಿತು ಸರ್ಕಾರವು ಚಿಂತನೆ ನಡೆಸಿದೆಯೇ ?

## ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಕೆರೆಗಳು ನಿರ್ವಹಣೆಯಿಲ್ಲದೆ ಜನ–ಜಾನುವಾರುಗಳಿಗೆ ಕುಡಿಯುವ ನೀರಿಗೂ ತೊಂದರೆಯಾಗುತ್ತಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೨೭ (೧೪೫) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನಲ್ಲಿ ೩೯ ಕೆರೆಗಳು ಇದ್ದರೂ, ನಿರ್ವಹಣೆಯ ಕೊರತೆಯಿಂದ, ನೀರು ಇಲ್ಲದೆ ಈ ಭಾಗದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ತಾಲ್ಲೂಕಿನ ಈ ಕೆರೆಗಳ ನಿರ್ವಹಣೆ ಮಾಡಲು ಮತ್ತು ಕೆರೆಗಳಿಗೆ ನೀರು ತುಂಬಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು ;

(ಇ) ಹಲವಾರು ವರ್ಷಗಳಿಂದ ಹೂಳು ತುಂಬಿಕೊಂಡು ಕೆಲವು ಕೆರೆಗಳು ಇದ್ದೂ ಇಲ್ಲದಂತಾಗಿದ್ದು, ರೈತಾಪಿ ಜನ–ಜಾನುವಾರುಗಳಿಗೆ ಕುಡಿಯುವ ನೀರಿಗೂ ಕಷ್ಟಪಡುತ್ತಿರುವ ಈ ಭಾಗದ ಜನರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮಗಳೇನು ;

(ಈ) ೨೦೧೫–೧೬, ೨೦೧೬–೧೭ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯ ಕೆರೆಗಳ ನಿರ್ವಹಣೆಗೆ ಮತ್ತು ನೀರು ತುಂಬಿಸಲು ನಿಗಧಿಪಡಿಸಿದ್ದ ಅನುದಾನವೆಷ್ಟು ; ಬಿಡುಗಡೆಯಾದ ಅನುದಾನವೆಷ್ಟು ; ಬಳಕೆಯಾದ ಅನುದಾನವೆಷ್ಟು ; ಉಳಿಕೆಯೆಷ್ಟು ? (ವಿವರ ನೀಡುವುದು)

## ರಾಜ್ಯದಲ್ಲಿ ಹುಲಿಗಳ ಸಾವಿನ ನಿರ್ಲಕ್ಷ್ಯದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೨೮ (೧೭೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ವರ್ಷ ಹುಲಿಗಳ ಗಣತಿ ಪ್ರಕಾರ ರಾಜ್ಯದ ವ್ಯಾಪ್ತಿಯಲ್ಲಿ ಇದ್ದ ಹುಲಿಗಳ ಸಂಖ್ಯೆ ಎಷ್ಟು ;

(ಆ) ಕಳೆದ ಡಿಸೆಂಬರ್, ಜನವರಿ ತಿಂಗಳಲ್ಲಿ ೫ ಹುಲಿಗಳು ಮೃತಪಟ್ಟಿದ್ದು, ಈ ಸಾವಿಗೆ ನೈಸರ್ಗಿಕ ಕಾರಣಗಳಿದ್ದರೂ, ಅರಣ್ಯ ಇಲಾಖೆಯ ಸಿಬ್ಬಂದಿಯ ನಿರ್ಲಕ್ಷ್ಯ ಕಾರಣವೆಂದು ಹೇಳಲಾಗುತ್ತಿದ್ದು, ಇದಕ್ಕೆ ಸರ್ಕಾರದ ಉತ್ತರವೇನು ;

(ಇ) ಹುಲಿಗಳ ರಕ್ಷಣೆಗೆ ಸರ್ಕಾರವು ಎಷ್ಟು ಹಣವನ್ನು ಖರ್ಚು ಮಾಡುತ್ತಿದೆ ; ಹುಲಿಗಳ ಸಾವನ್ನು ತಡೆಗಟ್ಟಲು ಸರ್ಕಾರವು ಏನು ಕ್ರಮ ವಹಿಸಲಿದೆ ?

## ಶಿವಮೊಗ್ಗ ಜಿಲ್ಲೆ ಸಣ್ಣ ನೀರಾವರಿ ಇಲಾಖೆ ವತಿಯಿಂದ ಕೈಗೊಂಡ ೧೨ ಏತ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೨೯ (೧೭೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶಿವಮೊಗ್ಗ ಜಿಲ್ಲೆ ಸಣ್ಣ ನೀರಾವರಿ ಇಲಾಖೆ ವತಿಯಿಂದ ಕೈಗೊಂಡ ಒಟ್ಟು ೧೨ ಏತ ನೀರಾವರಿ ಯೋಜನೆಗಳು ಯಾವುವು ; ಈ ಯೋಜನೆಗಳು ಯಾವ ಹಂತದಲ್ಲಿದೆ ; (ವಿವರ ನೀಡುವುದು)

(ಆ) ಶಿವಮೊಗ್ಗ ಜಿಲ್ಲೆ, ಕಾಕನಹಸೂಡಿ ಏತ ನೀರಾವರಿ ಯೋಜನೆ ಸೇರಿದಂತೆ ಒಟ್ಟು ೧೨ ಏತ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸದೆ, ಕೇವಲ ಕಡತದಲ್ಲಿ ಮಾತ್ರ ಕಾಮಗಾರಿಯನ್ನು

ಪೂರ್ಣಗೊಳಿಸಿ ಸರ್ಕಾರವನ್ನು ಹಾಗೂ ಜಿಲ್ಲೆಯ ರೈತರನ್ನು ವಂಚಿಸಿರುವ ಇಲಾಖೆಯ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಇ) ನೆನೆಗುದಿಗೆ ಬಿದ್ದಿರುವ ಈ ಯೋಜನೆಗಳನ್ನು ಪೂರ್ಣಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೩೦ (೧೭೩) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟು ಉದ್ಯೋಗ ವಿನಿಮಯ ಕೇಂದ್ರಗಳೆಷ್ಟು ; ಅಲ್ಲಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಇವುಗಳಿಗಾಗಿ ವಿನಿಯೋಗಿಸುವ ವಾರ್ಷಿಕ ವೆಚ್ಚವೆಷ್ಟು ; (ವಿವರ ನೀಡುವುದು)

(ಆ) ಈ ಕೇಂದ್ರಗಳಲ್ಲಿ ಕಳೆದ ೩ ವರ್ಷಗಳ ಅವಧಿಯಲ್ಲಿ ದಾಖಲಾದ ಉದ್ಯೋಗ ಆಕಾಂಕ್ಷಿಗಳ ಸಂಖ್ಯೆ ಎಷ್ಟು ; (ವರ್ಗವಾರು ವಿವರ ನೀಡುವುದು)

(ಇ) ಈ ವಿನಿಮಯ ಕೇಂದ್ರಗಳಿಂದ ಕಳೆದ ೩ ವರ್ಷಗಳ ಅವಧಿಯಲ್ಲಿ ಉದ್ಯೋಗ ಪಡೆದುಕೊಂಡ ಅಭ್ಯರ್ಥಿಗಳ ಸಂಖ್ಯೆ ಎಷ್ಟು ;

(ಈ) ಈಗಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಉದ್ಯೋಗಗಳ ಮಾಹಿತಿ ಸಂಪರ್ಕ ಜಾಲ ( Website ) ಮುಖಾಂತರ ಲಭ್ಯವಾಗುತ್ತಿದ್ದು, ಇದಕ್ಕೆ ತಕ್ಕಂತೆ ಈ ಉದ್ಯೋಗ ವಿನಿಮಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಹಾಗೂ ಅವುಗಳನ್ನು ಮಾನವ ಸಂಪನ್ಮೂಲ ಹಾಗೂ ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನಾಗಿ ಪರಿವರ್ತಿಸುವಲ್ಲಿ ಸರ್ಕಾರ ಕ್ರಮ ಕೈಗೊಳ್ಳಲಿದೆಯೇ ?

## ರಾಜ್ಯದಲ್ಲಿ ಎದುರಾಗಿರುವ ಬರಪರಿಸ್ಥಿತಿ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೩೧ (೧೭೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳನ್ನು ಬರ ಪೀಡಿತವೆಂದು ಘೋಷಿಸಲಾಗಿದೆ ;

(ಆ) ಈ ಬರ ಪೀಡಿತ ತಾಲ್ಲೂಕುಗಳಲ್ಲಿ ಯಾವ ಯಾವ ಪರಿಹಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ;

(ಇ) ಬರ ಪೀಡಿತ ಪ್ರದೇಶಗಳಲ್ಲಿ ಎಷ್ಟು ಗೋಶಾಲೆಗಳನ್ನು ತೆರೆಯಲಾಗಿದೆ ;

(ಈ) ಈ ತಾಲ್ಲೂಕುಗಳಲ್ಲಿ ಒಟ್ಟು ಎಷ್ಟು ಹೆಕ್ಟೇರ್ ಪ್ರದೇಶಗಳಲ್ಲಿ ಬೆಳೆ ನಾಶವಾಗಿದೆ ಹಾಗೂ ನಷ್ಟವಾದ ಮೊತ್ತವೆಷ್ಟು ;

(ಉ) ಬರ ಪರಿಹಾರಕ್ಕಾಗಿ ಕೇಂದ್ರದಿಂದ ಈವರೆಗೆ ಬಂದ ಸಹಾಯಧನವೆಷ್ಟು ? (ಬಿಡುಗಡೆಯಾದ ಮೊತ್ತದ ತಾಲ್ಲೂಕುವಾರು ವಿವರ ನೀಡುವುದು)

## ಬೆಂಗಳೂರು ನಗರದಲ್ಲಿ ಪರಿಸರ ಮಾಲೀನ್ಯದ ಕುರಿತು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೩೨ (೧೭೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದೇಶದ ಅತಿ ಹೆಚ್ಚು ಮಲೀನಗೊಂಡಿರುವ ನಗರಗಳಲ್ಲಿ ಬೆಂಗಳೂರು ಸೇರಿದ್ದು, ಗಣನೀಯ ಪ್ರಮಾಣದಲ್ಲಿ ವಾಹನ ದಟ್ಟಣೆ ಹೆಚ್ಚಾಗುತ್ತಿರುವುದನ್ನು ನಿಯಂತ್ರಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ;

(ಆ) ವಾಹನಗಳಿಂದ ಶೇ.೪೦, ರಸ್ತೆಯ ದೂಳಿನಿಂದ ಶೇ.೨೦, ಕಟ್ಟಡಗಳ ತ್ಯಾಜ್ಯದಿಂದ ಶೇ.೨೦, ಕೈಗಾರಿಕೆ ಮತ್ತು ಕಸ ಸುಡುವುದರಿಂದ ಶೇ.೧೮ರ ಪ್ರಮಾಣದಲ್ಲಿ ಪರಿಸರ ಮಾಲಿನ್ಯಗೊಳ್ಳುತ್ತಿರುವುದಾಗಿ ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ತರಹದ ಮಾಲೀನ್ಯದ ನಿಯಂತ್ರಣಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

## ರಾಜ್ಯ ಬರಗಾಲದ ಹಿನ್ನೆಲೆಯಲ್ಲಿ ಗಂಜಿ ಕೇಂದ್ರ ಹಾಗೂ ಗೋಶಾಲೆಗಳ ಬಗ್ಗೆ

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ)(ನಾಮನಿರ್ದೇಶನ ಹೊಂದಿದವರು) :–**

೧೩೩ (೧೨೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಬಂದಿರುವ ಭೀಕರ ಬರಗಾಲದ ಹಿನ್ನೆಲೆಯಲ್ಲಿ ಕಳೆದ ಒಂದು ವರ್ಷದಲ್ಲಿ ಎಷ್ಟು ಗಂಜಿ ಕೇಂದ್ರಗಳನ್ನು ತೆರೆಯಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಪಶುಗಳಿಗೆ ಮೇವು ಇಲ್ಲದ ಹಿನ್ನೆಲೆಯಲ್ಲಿ ಎಷ್ಟು ಗೋಶಾಲೆಗಳನ್ನು ಸರ್ಕಾರದಿಂದ ಸ್ಥಾಪಿಸಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು) ಇವುಗಳಿಗೆ ಸರ್ಕಾರದಿಂದ ಪ್ರತಿ ತಿಂಗಳು ಖರ್ಚು ಮಾಡುತ್ತಿರುವ ಹಣವೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ಸ್ಥಳೀಯ ರೈತರಿಂದ ಮೇವು ಖರೀದಿಸಲು ತೆಗೆದುಕೊಂಡ ಕ್ರಮಗಳೇನು ?

## ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೧೩೪ (೧೨೭) ಮಾನ್ಯ ಜವಳಿ ಹಾಗೂ ಮುಜರಾಯಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಇತ್ತೀಚಿನ ಸ್ಥಿತಿ–ಗತಿ ಏನು ; ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ;

(ಆ) ನಿಗಮದಲ್ಲಿ ನೇಕಾರರಿಗೆ ಸರಿಯಾಗಿ ಪರಿವರ್ತನಾ ದರ ನೀಡದಿರಲು ಕಾರಣಗಳೇನು ;

(ಇ) ನೇಕಾರರಿಗೆ ಸರಿಯಾಗಿ ಭೀಮು ನೂಲು ಸರಬರಾಜು ಮಾಡದಿರಲು ಕಾರಣವೇನು ;

(ಈ) ಹಾಲಿ ನೇಕಾರರ ಸಂಖ್ಯೆ ಎಷ್ಟು ; ನಿಗಮದಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ ಎಷ್ಟು ;

(ಉ) ನಿವೃತ್ತಿ ನೌಕರರಿಗೆ ನಿಗಮದ ಅವಧಿಯಲ್ಲಿ ಹಣ ಪಾವತಿಸಲಾಗಿದೆಯೇ ; ಇಲ್ಲದಿದ್ದಲ್ಲಿ, ಕಾರಣವೇನು; ಯಾವಾಗ ಪಾವತಿಸಲಾಗುವುದು ?

## ಬಡ ನೇಕಾರರಿಗೆ ಸುವರ್ಣ ವಸ್ತ್ರ ನೀತಿಯ ಸೌಲಭ್ಯಗಳ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೧೩೫ (೧೨೮) ಮಾನ್ಯ ಜವಳಿ ಹಾಗೂ ಮುಜರಾಯಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸುವರ್ಣ ವಸ್ತ್ರ ನೀತಿಯಲ್ಲಿ ಅಳವಡಿಸಿರುವ ಪಂಚವಾರ್ಷಿಕ ಕಾರ್ಯಕ್ರಮಗಳಾವುವು ;

(ಆ) ಬಡ ನೇಕಾರರಿಗೆ ಸುವರ್ಣ ವಸ್ತ್ರ ನೀತಿಯಲ್ಲಿ ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ ;

(ಇ) ಕಳೆದ ೩ ವರ್ಷದ ಆಯವ್ಯಯದಲ್ಲಿ ನೇಕಾರರಿಗೆ ಯಾವ ಯಾವ ಯೋಜನೆಗಳನ್ನು ಜಾರಿಗೊಳಿಸಲಾಗಿದೆ ; (ಜಿಲ್ಲಾವಾರು, ಯೋಜನಾವಾರು ಮೊತ್ತ ಅಂಕಿ-ಸಂಖ್ಯೆ ವಿವರ ನೀಡುವುದು)

(ಈ) ಈ ಯೋಜನೆಗಳಿಗೆ ನೀಡಿರುವ ಹಣ ಆಯಾ ವರ್ಷದಲ್ಲಿ ಖರ್ಚಾಗಿದೆಯೇ ?

## ತುಮಕೂರು ಜಿಲ್ಲೆಯಲ್ಲಿ ರೈತರಿಗೆ ಮೀನುಗಾರಿಕೆ ಕೃಷಿ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೧೩೬ (೧೩೦) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ತುಮಕೂರು ಜಿಲ್ಲೆಯ ರೈತರು ಮೀನುಗಾರಿಕೆ ಕೃಷಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ; (ಯೋಜನೆವಾರು/ ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಮೀನುಗಾರಿಕೆ ಅಭಿವೃದ್ಧಿಗಾಗಿ ಸರ್ಕಾರವು ತುಮಕೂರು ಜಿಲ್ಲೆಯ ಪ್ರತಿ ತಾಲ್ಲೂಕಿಗೆ ನೀಡಿರುವ ಅನುದಾನವೆಷ್ಟು ; (ತಾಲ್ಲೂಕುವಾರು, ಗ್ರಾಮವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ತುಮಕೂರು ಜಿಲ್ಲೆಯಲ್ಲಿರುವ ಮೀನುಗಾರಿಕೆ ಕಛೇರಿಗಳೆಷ್ಟು ; ಅವುಗಳಲ್ಲಿ ಸ್ವಂತ ಕಟ್ಟಡ ಹಾಗೂ ಬಾಡಿಗೆ ಕಟ್ಟಡಗಳಲ್ಲಿರುವ ಕಛೇರಿಗಳ ಸಂಖ್ಯೆ ಎಷ್ಟು ; ಅವುಗಳು ಎಲ್ಲೆಲ್ಲಿವೆ ; (ತಾಲ್ಲೂಕುವಾರು, ಗ್ರಾಮವಾರು ಸಂಪೂರ್ಣ ಮಾಹಿತಿ ನೀಡುವುದು)

(ಈ) ತುಮಕೂರು ಜಿಲ್ಲೆಯಲ್ಲಿ ಈ ಇಲಾಖೆಗೆ ಮಂಜೂರಾಗಿರುವ ಹುದ್ದೆಗಳೆಷ್ಟು ; ಆ ಪೈಕಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳೆಷ್ಟು ; ಖಾಲಿ ಇರುವ ಹುದ್ದೆಗಳೆಷ್ಟು ; (ಮಾಹಿತಿ ನೀಡುವುದು)

(ಉ) ಫಲಾನುಭವಿಗಳಿಗೆ ನೀಡುವ ಸವಲತ್ತುಗಳ ಮಾನದಂಡಗಳೇನು ; ಯಾವ ಕಮಿಟಿ ಆಯ್ಕೆ ಮಾಡಲಾಗುತ್ತದೆ ?

## ಚಿಕ್ಕಮಗಳೂರು ಜಿಲ್ಲೆಯಲ್ಲಿ ಆನೆಗಳ ದಾಳಿಯ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೩೭ (೩೨೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿಕ್ಕಮಗಳೂರು ಜಿಲ್ಲೆಯ ಯಾವ ಯಾವ ಭಾಗದಲ್ಲಿ ಆಗಿಂದಾಗ್ಗೆ ದಾಳಿ ನಡೆಯುತ್ತಿರುತ್ತದೆ ;

(ಆ) ಆನೆಗಳ ದಾಳಿಯಿಂದ ಮೃತಪಟ್ಟವರ ಸಂಖ್ಯೆ ಎಷ್ಟು ; ಅವರಿಗೆ ನೀಡಿದ ಪರಿಹಾರ ಧನ ಎಷ್ಟು ; ಉಂಟಾದ ಬೆಳೆ ನಷ್ಟ ಎಷ್ಟು ; ಬೆಳೆ ನಷ್ಟ ಉಂಟಾದ ರೈತರಿಗೆ ಪರಿಹಾರ ನೀಡಲಾಗಿದೆಯೇ ;

(ಇ) ಆನೆಗಳ ದಾಳಿಯನ್ನು ನಿಯಂತ್ರಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಕಾವೇರಿ ನದಿಯ ನೀರು ಕಲುಷಿತಗೊಳ್ಳುತ್ತಿರುವುದರ ಕುರಿತು

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೩೮ (೧೧೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಡಗು ಜಿಲ್ಲೆಯಲ್ಲಿ ಹುಟ್ಟುವ ಕಾವೇರಿ ನದಿಯು ದಿನೇ ದಿನೇ ಕಲುಷಿತಗೊಳ್ಳುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು ; ಕಾವೇರಿ ನದಿ ಪಾತ್ರದಲ್ಲಿ ಹೋಮ್‌ಸ್ಟೇಗಳು, ರೆಸಾರ್ಟ್‌ಗಳು ಹಾಗೂ ಸಣ್ಣ ಕೈಗಾರಿಕೆಗಳು ತಲೆ ಎತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹೋಮ್‌ಸ್ಟೇಗಳು, ರೆಸಾರ್ಟ್‌ಗಳು ಹಾಗೂ ಸಣ್ಣ ಕೈಗಾರಿಕೆಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ ಹಾಗೂ ಕಲುಷಿತ ನೀರು ಕಾವೇರಿ ನದಿಗೆ ಸೇರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ ; ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಈ ನಿಟ್ಟಿನಲ್ಲಿ ಸಂಬಂಧಪಟ್ಟ ಮಾಲೀಕರುಗಳ ಮೇಲೆ ಸರ್ಕಾರ ಕೈಗೊಂಡಿರುವ ಕಾನೂನಾತ್ಮಕ ಕ್ರಮಗಳೇನು ? (ವಿವರ ನೀಡುವುದು)

## ಕ್ರೀಡಾ ಇಲಾಖೆಯ ಉತ್ತೇಜನ ಮತ್ತು ನೂತನವಾಗಿ ಕ್ರೀಡಾಂಗಣಗಳ ಕುರಿತು

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೩೯ (೧೧೮) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕ್ರೀಡಾ ಇಲಾಖೆಯು ನೂತನವಾಗಿ ತಾಲ್ಲೂಕುವಾರು ಮತ್ತು ಜಿಲ್ಲಾವಾರು ಕ್ರೀಡಾಂಗಣಗಳನ್ನು ನಿರ್ಮಿಸುತ್ತಿದೆಯೇ ; ಹಾಗಿದ್ದಲ್ಲಿ, ಎಲ್ಲೆಲ್ಲಿ ನಿರ್ಮಿಸಲಾಗಿದೆ; (ತಾಲ್ಲೂಕು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯ ಸರ್ಕಾರದ ಕ್ರೀಡಾ ಇಲಾಖೆಯು ಯಾವ ಯಾವ ಕ್ರೀಡೆಗಳನ್ನು ಉತ್ತೇಜಿಸುತ್ತಿದೆ ;

(ಇ) ಕಳೆದ ೩ ವರ್ಷಗಳಲ್ಲಿ ಸರ್ಕಾರ ಉತ್ತೇಜಿಸುತ್ತಿರುವ ಕ್ರೀಡೆಗಳಿಗೆ ಬಿಡುಗಡೆ ಮಾಡಿರುವ ಹಾಗೂ ವೆಚ್ಚ ಮಾಡಿರುವ ಅನುದಾನ ಎಷ್ಟು ;

(ಈ) ರಾಜ್ಯದಲ್ಲಿ ಇದುವರೆವಿಗೂ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡೆಗಳಿಗೆ ಆಯ್ಕೆಯಾಗಿರುವ ಕ್ರೀಡಾಪಟುಗಳ ಸಂಖ್ಯೆ ಎಷ್ಟು ; (ಕ್ರೀಡೆಗಳ ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡೆಗಳಿಗೆ ಕ್ರೀಡಾಪಟುಗಳನ್ನು ಆಯ್ಕೆ ಮಾಡುವಾಗ ಸರ್ಕಾರ ಅನುಸರಿಸುವ ಮಾನದಂಡಗಳೇನು / ಮಾರ್ಗ ಸೂಚಿಗಳೇನು ;

(ಊ) ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾಪಟುಗಳಿಗೆ ಸರ್ಕಾರ ಪ್ರತಿ ವರ್ಷ ವೆಚ್ಚ ಮಾಡುತ್ತಿರುವ ಮೊತ್ತವೆಷ್ಟು ; (ವಿವರಗಳನ್ನು ನೀಡುವುದು)

(ಋ) ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಿ ಗೆಲುವು ಸಾಧಿಸಿದ ಕ್ರೀಡಾಪಟುಗಳಿಗೆ ಸರ್ಕಾರ ಗೌರವ ಧನವನ್ನೇನಾದರು ನೀಡುತ್ತಿದೆಯೇ ;

(ಎ) ಹಾಗಿದ್ದಲ್ಲಿ, ಕಳೆದ ೩ ವರ್ಷಗಳಲ್ಲಿ ಯಾವ ಯಾವ ಕ್ರೀಡಾಪಟುಗಳಿಗೆ ಎಷ್ಟು ಪ್ರಮಾಣದ ಗೌರವಧನವನ್ನು ನೀಡಲಾಗಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯಿಂದ ಕೈಗೊಂಡ ಕಾಮಗಾರಿಗಳ ಕುರಿತು

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೦ (೧೧೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಿಂದ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯಿಂದ ಕೈಗೊಂಡ ಕಾಮಗಾರಿಗಳು ಯಾವುವು ;

(ಆ) ಕಳೆದ ಮೂರು ವರ್ಷಗಳಿಂದ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯ ವಿವಿಧ ಲೆಕ್ಕ ಶಿರ್ಷಿಕೆಗಳಡಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ, ಪಾವತಿಗೆ ಬಾಕಿಯಿರುವ ಬಿಲ್ಲುಗಳ ಮೊತ್ತವೆಷ್ಟು ; (ಜಿಲ್ಲಾವಾರು ಮತ್ತು ಲೆಕ್ಕ ಶೀರ್ಷಿಕೆಗಳವಾರು ಹಾಗೂ ಕಾಮಗಾರಿಗಳವಾರು ವಿವರಗಳನ್ನು ನೀಡುವುದು)

(ಇ) ಕಳೆದ ಮೂರು ವರ್ಷಗಳಿಂದ ಗುತ್ತಿಗೆದಾರರಿಗೆ, ಬಿಡುಗಡೆ ಮಾಡಿರುವ ಕಾಮಗಾರಿಗಳ ಬಿಲ್ಲುಗಳ ಮೊತ್ತವೆಷ್ಟು ; (ವರ್ಷವಾರು ಮತ್ತು ಕಾಮಗಾರಿಗಳವಾರು ಮಾಹಿತಿ ನೀಡುವುದು)

(ಈ) ಪ್ರಸ್ತುತ ಬಾಕಿಯಿರುವ ಬಿಲ್ಲುಗಳ ಮೊತ್ತವೆಷ್ಟು ; (ಜಿಲ್ಲಾವಾರು ವಿವರಗಳನ್ನು ನೀಡುವುದು)

(ಉ) ಗುತ್ತಿಗೆದಾರರಿಗೆ ಸಮಯಕ್ಕೆ ಸರಿಯಾಗಿ ಕಾಮಗಾರಿಗಳ ಬಿಲ್ಲಿನ ಹಣವನ್ನು ಪಾವತಿಸದೇ ಇರುವುದರಿಂದ ಗುತ್ತಿಗೆದಾರರು ತೊಂದರೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಹಾಗಿದ್ದಲ್ಲಿ, ಈ ಗುತ್ತಿಗೆದಾರರಿಗೆ ಸಕಾಲದಲ್ಲಿ ಕಾಮಗಾರಿಗಳ ಬಿಲ್ಲಿನ ಮೊತ್ತವನ್ನು ಪಾವತಿಸಲು ಸರ್ಕಾರಕ್ಕಿರುವ ತೊಂದರೆಗಳೇನು ;

(ಋ) ಹಾಗಿದ್ದಲ್ಲಿ, ಬಾಕಿ ಇರುವ ಗುತ್ತಿಗೆದಾರರ ಬಿಲ್ಲಿನ ಮೊತ್ತವನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಎ) ಹಾಗಿದ್ದಲ್ಲಿ, ಬಾಕಿ ಮೊತ್ತವನ್ನು ಯಾವಾಗ ಮತ್ತು ಎಷ್ಟು ಪ್ರಮಾಣದಲ್ಲಿ ಬಿಡುಗಡೆ ಮಾಡಲಾಗುವುದು ? (ವಿವರಗಳನ್ನು ನೀಡುವುದು)

## ಆಂಧ್ರಪ್ರದೇಶದ ಶ್ರೀ ಶೈಲಂನಲ್ಲಿರುವ ಕರ್ನಾಟಕ ಛತ್ರದ ದುಸ್ಥಿತಿಯ ಬಗ್ಗೆ

**ಶ್ರೀ ಕೆ.ವಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು):–**

೧೪೧ (೧೭೬) ಮಾನ್ಯ ಜವಳಿ ಹಾಗೂ ಮುಜರಾಯಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆಂಧ್ರಪ್ರದೇಶದ ಶ್ರೀ ಶೈಲಂನಲ್ಲಿರುವ ಕರ್ನಾಟಕದ ಛತ್ರ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ೨೦೧೩ರಿಂದ ಇಲ್ಲಿಯವರೆಗೆ ಸದರಿ ಛತ್ರದ ನಿರ್ವಹಣೆಗಾಗಿ ಸರ್ಕಾರ ಬಿಡುಗಡೆ ಮಾಡಿದ ಅನುದಾನವೆಷ್ಟು ; (ಸಿಬ್ಬಂದಿ ವೆಚ್ಚ ಮತ್ತು ಕಟ್ಟಡ ನಿರ್ವಹಣೆಯ ಮೊತ್ತವನ್ನು ಪ್ರತ್ಯೇಕವಾಗಿ ನೀಡುವುದು)

(ಇ) ೨೦೧೩ರಿಂದ ಇಲ್ಲಿಯವರೆಗೆ ಈ ಛತ್ರದಲ್ಲಿ ಆಶ್ರಯ ಪಡೆದ ಭಕ್ತಾದಿಗಳ ಸಂಖ್ಯೆ ಎಷ್ಟು ; (ವರ್ಷವಾರು ವಿವರ ನೀಡುವುದು)

(ಈ) ಈ ಛತ್ರದ ಜಾಗದ ಗುತ್ತಿಗೆ ಅವಧಿ ಮುಗಿದಿದೆಯೇ ;

(ಉ) ಮುಗಿದಿದ್ದರೆ, ನವೀಕರಣಕ್ಕಾಗಿ ಸರ್ಕಾರ ಕೈಗೊಂಡ ಕ್ರಮವೇನು ?

## ರಾಜ್ಯದ ಗ್ರಾಮತಾಣಾ ವ್ಯಾಪ್ತಿಯ ಪುನರ್ ನಿಗಧಿಯ ಬಗ್ಗೆ

**ಶ್ರೀ ಕೆ.ವಿ. ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೪೨ (೧೭೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಗ್ರಾಮತಾಣಾ ವ್ಯಾಪ್ತಿಯನ್ನು ಮೀರಿ ಗ್ರಾಮಗಳು ಬೆಳೆದಿರುವುದು(ವಿಸ್ತಾರ ಹೊಂದಿರುವುದು) ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಗ್ರಾಮತಾಣಾ ವ್ಯಾಪ್ತಿಯನ್ನು ಈ ಹಿಂದೆ ಯಾವಾಗ ನಿಗಧಿಪಡಿಸಲಾಗಿತ್ತು; ಅಂದಿನ ರಾಜ್ಯದ ಜನಸಂಖ್ಯೆಯೆಷ್ಟು ;

(ಇ) ಗ್ರಾಮಾತಾಣಾ ವ್ಯಾಪ್ತಿಯನ್ನು ವಿಸ್ತರಿಸದೇ ಇರುವುದರಿಂದ, ಗ್ರಾಮೀಣ ಪ್ರದೇಶದ ಜನತೆಗೆ ಮನೆ ನಿರ್ಮಿಸಿಕೊಳ್ಳಲು ಹಲವು ರೀತಿಯ ಸಮಸ್ಯೆಗಳುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಗ್ರಾಮತಾಣಾ ವ್ಯಾಪ್ತಿಯನ್ನು ಪುನರ್ ನಿಗಧಿಪಡಿಸಲು ಸರ್ಕಾರ ತೀರ್ಮಾನಿಸಿದೆಯೇ ;

(ಉ) ತೀಮಾನಿಸಿದ್ದಲ್ಲಿ, ಪುನರ್ ನಿಗಧಿಪಡಿಸಲು ಕಾಲಮಿತಿಯೇನು ?

## ಮೈಸೂರಿನಲ್ಲಿ ಇ.ಎಸ್.ಐ.ಆಸ್ಪತ್ರೆಯ ನಿರ್ಮಾಣ

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜು) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೩ (೧೮೩) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ನಗರದಲ್ಲಿ ನಿರ್ಮಿಸುತ್ತಿರುವ ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆಯ ನಿರ್ಮಾಣ ಕಾರ್ಯವು ಕುಂಟುತ್ತಾ ಸಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ನಿರ್ಮಾಣ ಕಾರ್ಯದಲ್ಲಿ ಸೂಕ್ತವಾದ ರೀತಿಯಲ್ಲಿ, ಲಿಫ್ಟ್, ರ್‍ಯಾಂಪ್, ಶೌಚಾಲಯಗಳು ಹಾಗೂ ಇತರೆ ವ್ಯವಸ್ಥೆಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಸರಿಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ;

(ಆ) ಮೈಸೂರು ಇ.ಎಸ್.ಐ ಆಸ್ಪತ್ರೆಗೆ ಮಂಜೂರಾಗಿರುವ ವೈದ್ಯಕೀಯ, ಅರೆವೈದ್ಯಕೀಯ ಮತ್ತು ವೈದ್ಯೇತರ ಸಿಬ್ಬಂದಿ ಸಂಖ್ಯೆ ಎಷ್ಟು; ಹಾಲಿ ಸೇವೆ ಸಲ್ಲಿಸುತ್ತಿರುವ ಮತ್ತು ಖಾಲಿಯಿರುವ ಸಿಬ್ಬಂದಿಗಳ ಸಂಖ್ಯೆಯನ್ನು ನೀಡುವುದು; ಸಿಬ್ಬಂದಿಯನ್ನು ಭರ್ತಿ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಇ.ಎಸ್.ಐ. ಕಾರ್ಪೊರೇಷನ್‌ಗೆ ಸೂಚನೆ ನೀಡಲಾಗುವುದೇ ;

(ಇ) ಸದರಿ ಆಸ್ಪತ್ರೆಯ ವ್ಯಾಪ್ತಿಗೆ ಕೊಡಗು, ಚಿಕ್ಕಮಗಳೂರು ಜಿಲ್ಲೆಗಳನ್ನು ಸೇರಿಸಿದ್ದು, ಹೆಚ್ಚಿನ ಸಿಬ್ಬಂದಿ ಹಾಗೂ ಇತರೆ ವ್ಯವಸ್ಥೆಗಳನ್ನು ಒದಗಿಸುವಂತೆ ಸೂಕ್ತ ಸೂಚನೆಗಳನ್ನು ನೀಡಲಾಗುವುದೇ ?

## ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿನ ಗೋಶಾಲೆಗಳ ಬಗ್ಗೆ

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜು) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೪ (೧೮೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಎಲ್ಲೆಲ್ಲಿ ಗೋಶಾಲೆಗಳನ್ನು ಪ್ರಾರಂಭಿಸಲಾಗಿದೆ; ಇಲ್ಲಿ ಎಷ್ಟು ಗೋವುಗಳಿಗೆ ಅವಕಾಶ ಕಲ್ಪಿಸಲಾಗಿದೆ; ಮೇವಿನ ಸಂಗ್ರಹ ಎಷ್ಟು; ನೀರಿಗೆ

ಮಾಡಿರುವ ವ್ಯವಸ್ಥೆ ಏನು; ಇನ್ನೂ ಎಲ್ಲೆಲ್ಲಿ ಗೋಶಾಲೆಗಳನ್ನು ತೆರೆಯುವ ಉದ್ದೇಶ ಇದೆ; ಎಲ್ಲೆಲ್ಲಿ ಗೋಶಾಲೆಗಳನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗಿದೆ; (ವಿವರ ಒದಗಿಸುವುದು)

(ಆ) ಜಾನುವಾರುಗಳಿಗೆ ಮೇವು ನೀರಿನ ಕೊರತೆ ಉಂಟಾಗಿದ್ದು, ಗೋಶಾಲೆಗಳನ್ನು ಬೇಗ ಆರಂಭಿಸಲು ಮತ್ತು ಜಾನುವಾರುಗಳಿಗೆ ಸಮರ್ಪಕ ಮೇವು ನೀರಿನ ವ್ಯವಸ್ಥೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ ;

(ಇ) ಕೊಳ್ಳೆಗಾಲ ತಾಲ್ಲೂಕಿನ ಹನೂರು ಸಮೀಪದ ರಾಮಾಪುರದಲ್ಲಿ ಆರಂಭಿಸಿರುವ ಗೋಶಾಲೆಯಲ್ಲಿ ಇರುವ ಜಾನುವಾರುಗಳೆಷ್ಟು; ಈ ಜಾನುವಾರುಗಳಿಗೆ ಮೇವು ನೀರಿನ ಕೊರತೆ ಉಂಟಾಗಿದ್ದು, ಸೂಕ್ತ ವ್ಯವಸ್ಥೆ ಇಲ್ಲದ ಕಾರಣ, ಜನರು ಜಾನುವಾರುಗಳನ್ನು ಹಿಂದಕ್ಕೆ ತೆಗೆದುಕೊಂಡು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಎರಡೂ ಜಿಲ್ಲೆಗಳಲ್ಲಿ ಮೇವಿನ ಅಭಾವ ಉಂಟಾಗಿ ಮೇವಿಗೆ ದುಬಾರಿ ಬೆಲೆ ತೆರಬೇಕಾಗಿದ್ದು, ಹಣ ಕೊಟ್ಟರೂ ಮೇವು ಸಿಗದ ಪರಿಸ್ಥಿತಿ ಇರುವುದರಿಂದ ಕೂಡಲೇ ಸರ್ಕಾರ ಸಾಕಷ್ಟು ಮೇವು ಸಂಗ್ರಹ ಮಾಡಿ ರೈತರಿಗೆ ಒದಗಿಸಲು ಕ್ರಮ ತೆಗೆದುಕೊಳ್ಳುವುದೇ ?

## ನಾಗರಹೊಳೆ, ಬಿಳಿಗಿರಿರಂಗನ ಬೆಟ್ಟ, ಬಂಡಿಪುರ ಮತ್ತು ಮಹದೇಶ್ವರ ಬೆಟ್ಟದಲ್ಲಿ ಹುಲಿಗಳ ಸಾವು

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜು) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೫ (೧೮೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನಾಗರಹೊಳೆ, ಬಿಳಿಗಿರಿರಂಗನ ಬೆಟ್ಟ, ಬಂಡಿಪುರ ಮತ್ತು ಮಹದೇಶ್ವರಬೆಟ್ಟ, ಕಾವೇರಿ ಅರಣ್ಯ ಧಾಮ, ರಾಷ್ಟ್ರೀಯ ಉದ್ಯಾನವನ ಮತ್ತು ಅರಣ್ಯಧಾಮಗಳಲ್ಲಿ ಇರುವ ಹುಲಿಗಳ ಸಂಖ್ಯೆ ಎಷ್ಟು; ಕಳೆದ ಆರು ತಿಂಗಳಲ್ಲಿ ಎಷ್ಟು ಹುಲಿಗಳು ಸಾವಿಗೀಡಾಗಿವೆ; ಇದಕ್ಕೆ ಕಾರಣಗಳೇನು; (ವಿವರ ಒದಗಿಸುವುದು)

(ಆ) ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗಗಳ ಉಪೇಕ್ಷೆ ಮತ್ತು ಅವೈಜ್ಞಾನಿಕ ಕ್ರಮಗಳಿಂದ ಈ ಹುಲಿಗಳು ಸಾವಿಗೀಡಾಗಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ ;

(ಇ) ಅರಣ್ಯ ಇಲಾಖೆಯ ಮೇಲ್ಕಂಡ ರಾಷ್ಟ್ರೀಯ ಉದ್ಯಾನವನಗಳಲ್ಲಿ ಕೇವಲ ಪಶುವೈದ್ಯಕೀಯದಲ್ಲಿ ಅನುಭವ ಪಡೆದ ವೈದ್ಯರುಗಳಿದ್ದು, ವನ್ಯ ಜೀವಿಗಳ ಬಗ್ಗೆ ತಿಳಿದಿರುವ ವಿಶೇಷ ತಜ್ಞ, ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಗುಂಡಾಲ್ ಜಲಾಶಯದ ನೀರಿನ ಬಗ್ಗೆ

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜು) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೬ (೧೮೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗುಂಡಾಲ್ ಜಲಾಶಯದಲ್ಲಿ ಹಾಲಿ ಇರುವ ನೀರಿನ ಪ್ರಮಾಣವೆಷ್ಟು; ಈ ನೀರನ್ನು ಮುಂದಿನ ಬೇಸಿಗೆಯಲ್ಲಿ ಜನ ಜಾನುವಾರುಗಳ ಬಳಕೆಗೆ ಅನುಕೂಲವಾಗುವಂತೆ ಕೆರೆಗಳಿಗೆ ತುಂಬಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ನೀರಾವರಿ ಸಲಹಾ ಸಮಿತಿಯು ಈ ಬಗ್ಗೆ ಶಿಫಾರಸ್ಸು ಮಾಡಿದೆಯೇ ;

(ಆ) ಗುಂಡಾಲ್ ಜಲಾಶಯದ ಬಲದಂಡೆ ನಾಲೆ ಹೂಳನ್ನು ತೆಗೆಸಿ ಈ ನಾಲೆಯ ಮೂಲಕ ಕೆರೆಗಳಿಗೆ ನೀರನ್ನು ಹರಿಸಲು ಕ್ರಮ ಜರುಗಿಸಲಾಗುವುದೇ ;

(ಇ) ಈ ಜಲಾಶಯದ ಅಭಿವೃದ್ಧಿಗೆ ಮತ್ತು ಈ ಜಲಾಶಯದ ಹಿಂದೆ ಉದ್ಯಾನವನದ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಸಸಾಲಟ್ಟಿ ಏತ ನೀರಾವರಿ ಯೋಜನೆಯ ಬಗ್ಗೆ

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) :–**

೧೪೭ (೨೨೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಜಮಖಂಡಿ ತಾಲ್ಲೂಕಿನ ಸಸಾಲಟ್ಟಿ ಏತ ನೀರಾವರಿ ಯೋಜನೆಗೆ ಮಂಜೂರದ ಅನುದಾನ ಎಷ್ಟು; ಈ ಯೋಜನೆಯ ವ್ಯಾಪ್ತಿಯಲ್ಲಿ ಎಷ್ಟು ಕ್ಷೇತ್ರ ವಿಸ್ತೀರ್ಣದ ಜಮೀನು ನೀರಾವರಿಗೆ ಒಳಪಡುತ್ತದೆ ;

(ಆ) ಈ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಯಾವಾಗ; ಇದನ್ನು ಯಾವ ಕಾಲ ಮಿತಿಯೊಳಗೆ ಪೂರ್ಣಗೊಳಿಸಲಾಗುವುದು ? (ಸಂಪೂರ್ಣವಾದ ಮಾಹಿತಿ ನೀಡುವುದು)

## ಪ್ರಾಧಿಕಾರ ರಚನೆ ಮಾಡುವ ಬಗ್ಗೆ

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) :–**

೧೪೮ (೨೨೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಭೂಸ್ವಾಧಿನ ಕಾಯ್ದೆಯ ಹೊಸ ಕಾನೂನಿನ ಪ್ರಕಾರ ಪ್ರತಿ ಜಿಲ್ಲೆಗೆ ಒಂದು ಪ್ರಾಧಿಕಾರ ಸ್ಥಾಪಿಸುವ ಅವಕಾಶವಿದ್ದು, ರಾಜ್ಯದಲ್ಲಿ ಇಲ್ಲಿಯವರೆಗೆ ಎಷ್ಟು ಪ್ರಾಧಿಕಾರಗಳು ರಚನೆಯಾಗಿವೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ೫೨೪ ಮೀ. ವ್ಯಾಪ್ತಿಗೆ ಎತ್ತರವನ್ನು ಹೆಚ್ಚಿಸಿದಾಗ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಹೆಚ್ಚಿನ ಭೂಸ್ವಾಧೀನವಾಗುತ್ತಿದ್ದು ಇಲ್ಲಿ ಇನ್ನೂ ಪ್ರಾಧಿಕಾರ ರಚನೆಯಾಗಿರುವುದಿಲ್ಲವೆಂಬ ಆರೋಪ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಪ್ರಾಧಿಕಾರವನ್ನು ರಚನೆ ಮಾಡುವ ಸಂಬಂಧ ಸರ್ಕಾರ ತೆಗೆದುಕೊಂಡ ಕ್ರಮವೇನು; (ವಿವರವಾದ ಮಾಹಿತಿ ನೀಡುವುದು)

(ಇ) ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಭೂಸ್ವಾಧೀನವಾಗಿ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ ಅರ್ಜಿಗಳು ಎಸ್.ಎಲ್.ಎ.ಓ ಕಛೇರಿಯಲ್ಲಿ ಎಷ್ಟು ಬಾಕಿ ಇವೆ; ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಗಳ ಸಂಖ್ಯೆ ಎಷ್ಟು? (ಸಂಪೂರ್ಣವಾದ ಮಾಹಿತಿ ನೀಡುವುದು)

## ಅಕ್ರಮ–ಸಕ್ರಮ ಅರ್ಜಿಗಳ ಕುರಿತು

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೯ (೧೦೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ನಮೂನೆ ೫೦ ಮತ್ತು ೫೩ರಲ್ಲಿ ಅಕ್ರಮ–ಸಕ್ರಮದಡಿ ಭೂ ಮಂಜೂರಾತಿ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ಪೈಕಿ ವಿಲೇವಾರಿಗೊಂಡಿರುವ ಅರ್ಜಿಗಳ ಸಂಖ್ಯೆ ಎಷ್ಟು ಹಾಗೂ ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಅರ್ಜಿಗಳು ಬಾಕಿ ಉಳಿಯಲು ಕಾರಣವೇನು? (ವಿವರ ನೀಡುವುದು)

## ಕಾಡು ಪ್ರಾಣಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೦ (೧೦೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಅರಣ್ಯ ಪ್ರದೇಶದಲ್ಲಿ ಕಾಡು ಪ್ರಾಣಿಗಳಿಗೆ ಯಾವ ರೀತಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ; (ವಿವರ ನೀಡುವುದು)

(ಆ) ೨೦೧೬–೧೭ನೇ ಸಾಲಿನಲ್ಲಿ ಕಾಡು ಪ್ರಾಣಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; (ವಿವರ ನೀಡುವುದು)

(ಇ) ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಕಾಡ್ಗಿಚನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಸಾಮಾಜಿಕ ಭದ್ರತಾ ಯೋಜನೆಯ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೧ (೧೦೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರ ಸಾಮಾಜಿಕ ಭದ್ರತಾ ಯೋಜನೆಯ ಅಡಿಯಲ್ಲಿ ಅರ್ಹರಿಗೆ ಮಾಸಾಶನ ನೀಡುತ್ತಿರುವುದು ನಿಜವೇ ;

(ಆ) ಹಾಗಿದ್ದರೆ, ಸಾಮಾಜಿಕ ಭದ್ರತೆಯಲ್ಲಿ ಬರುವ ಯೋಜನೆಗಳ ವಿವರಗಳೇನು; ಆ ಯೋಜನೆಗಳಡಿಯಲ್ಲಿ ೨೦೧೩–೧೪ ರಿಂದ ೨೦೧೬–೧೭ ರವರೆಗೆ ಫಲಾನುಭವಿಗಳಿಗೆ ನೀಡಿರುವ ಮಾಸಾಶನ ಎಷ್ಟು ? (ಯೋಜನೆವಾರು, ವರ್ಷವಾರು ಪೂರ್ಣ ವಿವರ ಒದಗಿಸುವುದು)

## ರಾಜ್ಯದಲ್ಲಿ ೯೪ಸಿ ಅಡಿ ಸಲ್ಲಿಕೆಯಾದ ಅರ್ಜಿಗಳ ಬಗ್ಗೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೨ (೯೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ೯೪ಸಿ ಅಡಿ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಮಂಜೂರಾತಿ ನೀಡಿದ, ತಿರಸ್ಕರಿಸಿದ ಮತ್ತು ಬಾಕಿಯಿರುವ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಉಡುಪಿ ಜಿಲ್ಲೆಯಲ್ಲಿ ೯೪ಸಿ ಯಡಿ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಮಂಜೂರಾತಿ ನೀಡಿದ ತಿರಸ್ಕರಿಸಿದ ಮತ್ತು ಬಾಕಿಯಿರುವ ಅರ್ಜಿಗಳ ಸಂಖ್ಯೆ ಎಷ್ಟು; (ಹೋಬಳಿವಾರು ವಿವರ ನೀಡುವುದು)

(ಇ) ತಿರಸ್ಕೃತ ಅರ್ಜಿಗಳಲ್ಲಿ ರಸ್ತೆ ಪರಿಮಿತಿ, ಕುಮ್ಕಿ ಗೋಮಾಳ ಮತ್ತು ಇತರ ಕಾರಣಗಳಿಂದ ತಿರಸ್ಕೃತಗೊಂಡ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು, ಪ್ರತ್ಯೇಕ ಕಾರಣಸಹಿತ ಮಾಹಿತಿ ನೀಡುವುದು)

(ಈ) ೨೦೧೨ರ ಕಾಲಮಿತಿಯನ್ನು ಸಡಿಲಿಸದೆ ಅರ್ಜಿ ಸಲ್ಲಿಕೆಯ ಅವಧಿ ವಿಸ್ತರಣೆಯ ಔಚಿತ್ಯವೇನು ಇದರ ಮಂಜೂರಾತಿಯಲ್ಲಿ ಅಧಿಕಾರಿಗಳ ಸ್ವೇಚ್ಛಾಚಾರಕ್ಕೆ ಅವಕಾಶ ನೀಡಿದಂತೆ ಆಗುವುದಿಲ್ಲವೆ; ಈ ಬಗ್ಗೆ ಸರ್ಕಾರದ ಕ್ರಮವೇನು ?

## ಅಕ್ರಮ ಸಕ್ರಮ ಸಮಿತಿಯಲ್ಲಿ ಬಾಕಿಯಿರುವ ಅರ್ಜಿಗಳ ಬಗ್ಗೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೩ (೧೯೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉಡುಪಿ ಜಿಲ್ಲೆಯಲ್ಲಿ ಅಕ್ರಮ ಸಕ್ರಮ ಸಮಿತಿಯ ನಮೂನೆ ೫೦.೫೩ರಡಿ ಡೀಮ್ಡ್ ಫಾರಸ್ಟ್ ವ್ಯಾಪ್ತಿಗೆ ಒಳಪಡುವ ಅರ್ಜಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಇತ್ಯರ್ಥಪಡಿಸಿ ತಡೆಹಿಡಿದ ಮತ್ತು ಇತ್ಯರ್ಥ ಪಡಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು, ಗ್ರಾಮವಾರು, ಅರ್ಜಿವಾರು ಸರ್ವೆ ನಂಬರ್‌ವಾರು ವಿವರ ನೀಡುವುದು)

(ಆ) ಉಡುಪಿ ಜಿಲ್ಲೆಯಲ್ಲಿ ಅಕ್ರಮ ಸಕ್ರಮ ಸಮಿತಿಯ ನಮೂನೆ ೫೦.೫೩ ರಡಿ ಸಿ ಮತ್ತು ಡಿ ವರ್ಗ ವ್ಯಾಪ್ತಿಗೆ ಒಳಪಡುವ ಅರ್ಜಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಇತ್ಯರ್ಥ ಪಡಿಸಿ ತಡೆ ಹಿಡಿದ ಮತ್ತು ಇತ್ಯರ್ಥ ಪಡಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು, ಗ್ರಾಮವಾರು, ಅರ್ಜಿವಾರು ಸರ್ವೆ ನಂಬರ್‌ವಾರು ವಿವರ ನೀಡುವುದು)

(ಇ) ಉಡುಪಿ ಜಿಲ್ಲೆಯಲ್ಲಿ ಅಕ್ರಮ ಸಕ್ರಮ ಸಮಿತಿಯ ನಮೂನೆ ೫೦.೫೩ರಡಿ ಕುಮ್ಕಿ ವ್ಯಾಪ್ತಿಗೆ ಒಳಪಡುವ ಅರ್ಜಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಇತ್ಯರ್ಥ ಪಡಿಸಿ ತಡೆಹಿಡಿದ ಮತ್ತು ಇತ್ಯರ್ಥ ಪಡಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು, ಗ್ರಾಮವಾರು, ಅರ್ಜಿವಾರು, ಸರ್ವೆ ನಂಬರ್‌ವಾರು ವಿವರ ನೀಡುವುದು)

(ಈ) ಉಡುಪಿ ಜಿಲ್ಲೆಯ ಅಕ್ರಮ ಸಕ್ರಮ ಸಮಿತಿಯ ನಮೂನೆ ೫೦.೫೩ರಡಿ ಗೋಮಾಳ ವ್ಯಾಪ್ತಿಗೆ ಒಳಪಡುವ ಅರ್ಜಿಗಳ ಸಂಖ್ಯೆ ಎಷ್ಟು; ಇವರುಗಳಲ್ಲಿ ಇತ್ಯರ್ಥಪಡಿಸಿ ತಡೆ ಹಿಡಿದ ಮತ್ತು ಇತ್ಯರ್ಥ ಪಡಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು, ಗ್ರಾಮವಾರು ಅರ್ಜಿವಾರು ಸರ್ವೆ ನಂಬರ್‌ವಾರು ವಿವರ ನೀಡುವುದು)

## ವರಾಹಿ ನೀರಾವರಿ ಯೋಜನೆಯ ಪೂರ್ಣ ಪ್ರಮಾಣದ ಪ್ರಯೋಜನ ದೊರೆಯದಿರುವುದರ ಬಗ್ಗೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೪ (೯೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯ ನೀರಾವರಿ ನಿಗಮದಿಂದ ನಿರ್ವಹಿಸುತ್ತಿರುವ ವರಾಹಿ ನೀರಾವರಿ ಯೋಜನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟನೆ ಮಾಡಿದ ದಿನಾಂಕದ ನಂತರ ಕರೆಯಲಾದ ಟೆಂಡರ್‌ಗಳ ಸಂಖ್ಯೆ ಎಷ್ಟು; ಅವುಗಳ ಅಂದಾಜು ವೆಚ್ಚವೆಷ್ಟು; ಮತ್ತು ಈ ತನಕ ಮಾಡಲಾದ ವೆಚ್ಚವೆಷ್ಟು; (ವರ್ಷವಾರು, ಶೀರ್ಷಿಕೆವಾರು ವಿವರ ನೀಡುವುದು)

(ಆ) ಕರ್ನಾಟಕ ರಾಜ್ಯ ನೀರಾವರಿ ನಿಗಮದಿಂದ ನಿರ್ವಹಿಸುತ್ತಿರುವ ವರಾಹಿ ನೀರಾವರಿ ಯೋಜನೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಉದ್ಘಾಟನೆ ಮಾಡಿದ ನಂತರ ಪೂಣಗೊಂಡು ನೀರು ಹರಿಯದ ಕಾಲುವೆಗಳು ಯಾವುವು; ಮತ್ತು D-16 ಸಹಾ ಪೂರ್ಣ ಪ್ರಮಾಣದ ಪ್ರಯೋಜನ ರೈತರಿಗೆ ಸಿಗದಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ ;

(ಇ) ನೀರಾವರಿ ಯೋಜನೆಯಲ್ಲಿ ಉಡುಪಿ ಜಿಲ್ಲೆಯ ರೈತರ ಬಗ್ಗೆ ಇರುವ ನಿರ್ಲಕ್ಷ, ಉದಾಸೀನತೆ ಹಾಗೂ ಖಾಸಗಿ ವಿದ್ಯುತ್ ಉತ್ಪಾದಕರ ಪರ ಇಲಾಖೆ ಇದೆ ಎನ್ನುವ ಭಾವನೆ ಮೂಡುವ ಪೂರ್ವದಲ್ಲಿ ಸರಿಪಡಿಸಲು ಸರಕಾರವು ತೆಗೆದುಕೊಳ್ಳುವ ಕ್ರಮವೇನು ?

## ಉಡುಪಿ ಜಿಲ್ಲೆಯ ಅರಣ್ಯ ಇಲಾಖಾ ವ್ಯಾಪ್ತಿಗೆ ಸೇರಿದ ಪ್ರದೇಶಗಳ ಬಗ್ಗೆ

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೫೫ (೧೯೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉಡುಪಿ ಜಿಲ್ಲೆಯಲ್ಲಿ ಅರಣ್ಯ ಇಲಾಖೆ, ಕಂದಾಯ ಇಲಾಖೆಯಿಂದ ಡೀಮ್ಡ್ ಫಾರೆಸ್ಟ್‌ನ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾದ ಭೂಮಿಯ ವಿಸ್ತೀರ್ಣ ಮತ್ತು ಸರ್ವೆ ನಂಬರ್‌ಗಳು ಯಾವುವು; (ಗ್ರಾಮವಾರು, ಸರ್ವೆ ನಂಬರ್‌ವಾರು ವಿವರ ನೀಡುವುದು)

(ಆ) ಉಡುಪಿ ಜಿಲ್ಲೆಯಲ್ಲಿ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಭೌತಿಕ ಹಸ್ತಾಂತರವಾಗಿರುವ ಸಿ ಮತ್ತು ಡಿ ಭೂಮಿಗಳ ಸರ್ವೆ ನಂ. ಮತ್ತು ವಿಸ್ತೀರ್ಣವೆಷ್ಟು; (ಗ್ರಾಮವಾರು ಸರ್ವೆ ನಂಬರ್‌ವಾರು ವಿವರ ನೀಡುವುದು)

(ಇ) ಉಡುಪಿ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಿಂದ ಪರಿಗಣಿಸಿದ ಶಾಸನಬದ್ಧ ಅರಣ್ಯ (Statutory Forest) ದ ವಿಸ್ತೀರ್ಣ ಮತ್ತು ಸರ್ವೆ ನಂಬರ್‌ಗಳು ಯಾವುವು ; (ಗ್ರಾಮವಾರು ಸರ್ವೆ ನಂಬರ್‌ವಾರು ವಿವರ ನೀಡುವುದು)

(ಈ) ರೈತರ ಅಕ್ರಮ ಸಕ್ರಮದಡಿ ನಮೂನೆ ೫೦, ೫೩ರಲ್ಲಿ ಸಲ್ಲಿಸಿದ ಭೂಮಿಗಳಾದ ಹೊಲ, ಗದ್ದೆ, ತೋಟ, ಮನೆ, ಬಾವಿ ಹಟ್ಟಿ, ಅಂಗಳಗಳು ಡೀಮ್ಡ್ ಫಾರೆಸ್ಟ್‌ಯಡಿಯಲ್ಲಿ ಸೇರಿರುವುದೇ ಮತ್ತು ಇದು ಭೂ ಮಂಜೂರಾತಿಯಲ್ಲಿ ತಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದು ಅನುಷ್ಠಾನ ಮಾಡಲಾಗದ ಕಾಯಿದೆಯಾಗುವುದಿಲ್ಲವೇ; ಈ ಬಗ್ಗೆ ಸರ್ಕಾರದ ಕ್ರಮವೇನು ?

## ಸಾರ್ವಜನಿಕ ಹಿತದೃಷ್ಠಿಯಿಂದ ಅರಣ್ಯ ಪ್ರದೇಶವನ್ನು ಬಳಸುವ ಬಗ್ಗೆ

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೬ (೧೯೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಾರ್ವಜನಿಕರ ಹಿತದೃಷ್ಠಿಯಿಂದ ಒಂದು ಜಿಲ್ಲೆಯಲ್ಲಿ ಒಂದು ಹೆಕ್ಟೇರ್ ಅರಣ್ಯ ಪ್ರದೇಶವನ್ನು ತೆರವು ಮಾಡಲು ಕೇಂದ್ರ ಸರ್ಕಾರವು ಅನುಮತಿ ನೀಡಿರುವುದು ನಿಜವೇ; ಹೌದಾದಲ್ಲಿ, ಆದೇಶದ ಪ್ರತಿ ಒದಗಿಸುವುದು ;

(ಆ) ಸಾರ್ವಜನಿಕರ ಹಿತದೃಷ್ಠಿಯಿಂದ ೨ ಹೆಕ್ಟೇರ್ ಅರಣ್ಯ ಪ್ರದೇಶವನ್ನು ತೆರವು ಮಾಡಲು ಅನುಮತಿ ಕೊಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆಯೇ; ಹೌದಾದಲ್ಲಿ, ಆದೇಶದ ಪ್ರತಿ ಒದಗಿಸುವುದು ;

(ಇ) ಇಲ್ಲವಾದಲ್ಲಿ, ಜಿಲ್ಲೆಗಳಿಗೆ ಮತ್ತು ರಾಜ್ಯದಲ್ಲಿ ಸಾರ್ವಜನಿಕರ ಹಿತದೃಷ್ಠಿಯಿಂದ ಎಷ್ಟು ಹೆಕ್ಟೇರ್ ಅರಣ್ಯ ಪ್ರದೇಶವನ್ನು ಇತ್ಯರ್ಥಪಡಿಸಲು ಆಯಾ ಜಿಲ್ಲೆಗಳಿಗೆ ಮತ್ತು ರಾಜ್ಯಗಳಿಗೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ ? (ಪ್ರತಿ ಒದಗಿಸುವುದು)

## ಬರ ಪರಿಹಾರಕ್ಕೆ ಬಿಡುಗಡೆಯಾದ ಅನುದಾನ

**ಶ್ರೀ ರಘುನಾಥ್‌ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೫೭ (೧೬೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೬ನೇ ಸಾಲಿನ ಏಪ್ರಿಲ್‌ನಿಂದ ಇಲ್ಲಿಯವರೆಗೂ ರಾಜ್ಯದ ಬರ ಪರಿಹಾರಕ್ಕಾಗಿ ಬಿಡುಗಡೆಗೊಂಡಿರುವ ಅನುದಾನವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ೨೦೧೬ನೇ ಸಾಲಿನಲ್ಲಿ ಬರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರ ನೀಡಿರುವ ಅನುದಾನದ ಪಾಲೆಷ್ಟು ;

(ಇ) ರೈತರಿಗೆ ಬರ ಪರಿಹಾರವನ್ನು ಪಾವತಿಸುವಲ್ಲಿ ಜಿಲ್ಲಾಧಿಕಾರಿಗಳು ವಿಳಂಬ ಧೋರಣೆ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)

## ಯುವ–ಯುಗ ಕಾರ್ಯಕ್ರಮಗಳು

**ಶ್ರೀ ರಘುನಾಥ್‌ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೫೮ (೧೬೨) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರ್ಮಿಕ ಇಲಾಖೆಯಿಂದ 'ಯುವ–ಯುಗ' ಎಂಬ ಈ ಯೋಜನೆಯ ಉದ್ದೇಶವೇನು ಮತ್ತು ಇದರ ಮುಖ್ಯಾಂಶಗಳೇನು; ಈ ಕಾರ್ಯಕ್ರಮದ ರೂಪುರೇಷೆಗಳನ್ನು ತಯಾರಿಸಲಾಗಿದೆಯೇ;

(ಆ) ಈ ಯೋಜನೆಯು ಹಿಂದುಳಿದ ಬೀದರ್ ಜಿಲ್ಲೆಯಲ್ಲಿರುವ ಯುವ ಜನಾಂಗಕ್ಕೆ ಸಹಕಾರಿಯಾಗುವುದೇ; ಯೋಜನೆಯ ಅನುಷ್ಠಾನಕ್ಕಾಗಿ ಎಷ್ಟು ಹಣ ಮೀಸಲಿಡಲಾಗುವುದು ; ಈ ಯೋಜನೆ ಜಾರಿಯಾದಾಗಿನಿಂದ ಇಲ್ಲಿಯವರೆಗೆ ಬೀದರ್ ಜಿಲ್ಲೆಗೆ ಎಷ್ಟು ಹಣ ನೀಡಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ಯೋಜನೆಗೆ ಯುವ ಜನಾಂಗವನ್ನು ಆಯ್ಕೆ ಮಾಡಲು ಇರುವ ಮಾನದಂಡಗಳೇನು ; ಯಾವ ಜನಾಂಗದವರನ್ನು ಈ ಯೋಜನೆಯಲ್ಲಿ ಪಾಲ್ಗೊಳ್ಳುವಂತೆ ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ವಿವಿಧ ಯೋಜನೆಗಳಿಗಾಗಿ ಭೂ ಹಂಚಿಕೆ

**ಶ್ರೀ ರಘುನಾಥ್‌ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೫೯ (೧೬೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ವತಿಯಿಂದ ಯಾವ ಯಾವ ಯೋಜನೆಗಳಿಗಾಗಿ ಭೂಮಿ ಹಂಚಿಕೆ ಮಾಡಲಾಗಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಭೂಮಿ ಹಂಚಿಕೆ ಮಾಡಲು ಸರ್ಕಾರ ಅನುಸರಿಸುವ ಮಾನದಂಡಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ಯೋಜನೆಗಳ ಜವಾಬ್ದಾರಿಯನ್ನು ನಿರ್ವಹಿಸುವ ಅಧಿಕಾರಿಯ ಕಾರ್ಯವ್ಯಾಪ್ತಿಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ಗೋಮಾಳ ಜಮೀನು ಸಂರಕ್ಷಣೆ ಬಗ್ಗೆ

**ಶ್ರೀ ರಘುನಾಥ್‌ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೬೦ (೧೬೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿರುವ ಗೋಮಾಳ ಪ್ರದೇಶಗಳ ವಿಸ್ತೀರ್ಣ ಎಷ್ಟು ; (ತಾಲ್ಲೂಕುವಾರು ಸರ್ವೆ ನಂಬರ್ ಮತ್ತು ವಿಸ್ತೀರ್ಣ ಪೂರ್ಣ ವಿವರ ನೀಡುವುದು)

(ಆ) ಗೋಮಾಳ ಜಮೀನುಗಳನ್ನು ಸಂರಕ್ಷಿಸಲು ಹಾಗೂ ಅಕ್ರಮ ಒತ್ತುವರಿಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಗೋಮಾಳ ಮತ್ತು ಗುಂಡು ತೋಪುಗಳನ್ನು ಸಂಕರಕ್ಷಿಸಲು ಹಾಗೂ ಅಕ್ರಮ ಒತ್ತುವರಿಯಾಗದಂತೆ ತಡೆಗಟ್ಟಲು ಸರ್ಕಾರ ಜರುಗಿಸಿರುವ ಕಾನೂನು ಕ್ರಮಗಳೇನು ;

(ಈ) ಈವರೆಗೆ ಎಷ್ಟು ಗೋಮಾಳ ಪ್ರದೇಶಗಳ ಅಕ್ರಮ ಒತ್ತುವರಿದಾರರನ್ನು ಗುರುತಿಸಿ ಕ್ರಮ ಜರುಗಿಸಲಾಗಿದೆ ; ಅವುಗಳ ತೆರವಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು ?

## ರಾಜ್ಯದ ಉಪ ನೋಂದಣಿ ಅಧಿಕಾರಿಗಳ ಕಛೇರಿಗಳಲ್ಲಿ ಸಾರ್ವಜನಿಕರು ಶುಲ್ಕವನ್ನು ಪಾವತಿಸಲು ನಗದು ರಹಿತ ಶುಲ್ಕ ಪಾವತಿ ವ್ಯವಸ್ಥೆಯನ್ನು ಮಾಡುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೬೧ (೧೮೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಉಪ ನೋಂದಣಾಧಿಕಾರಿಗಳ ಕಛೇರಿಗಳಲ್ಲಿ ಸಾರ್ವಜನಿಕರು ಶುಲ್ಕವನ್ನು ಪಾವತಿಸಲು ಕೇಂದ್ರ ಸರ್ಕಾರದ ಆಶಯದಂತೆ, ನಗದು ರಹಿತ ಶುಲ್ಕ ಪಾವತಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆಯೇ;

(ಆ) ಕಲ್ಪಿಸಲಾಗಿದ್ದಲ್ಲಿ, ಅದರಿಂದ ಸಾರ್ವಜನಿಕರಿಗೆ ಆಗಿರುವ ಅನುಕೂಲತೆಗಳೇನು ; (ವಿವರ ನೀಡುವುದು)

(ಇ) ಕಲ್ಪಿಸಲಾಗದೇ ಇದ್ದಲ್ಲಿ, ಈ ಕುರಿತು ವಿವರ ನೀಡುವುದು;

(ಈ) Credit Card, Debit Card ಗಳ ಮೂಲಕ ಪಾವತಿಸಲು ವ್ಯವಸ್ಥೆ ಕಲ್ಪಿಸುವ ಬಗ್ಗೆ ಸರ್ಕಾರದ ನಿಲುವೇನು ?

## ಚಿಕ್ಕಮಗಳೂರು ಮತ್ತು ಕೊಪ್ಪ ಮೀಸಲು ಅರಣ್ಯಗಳಲ್ಲಿ ಥಿನ್ನಿಂಗ್ ಕಾರಣವೊಡ್ಡಿ ಅತ್ಯಮೂಲ್ಯ ಮರಗಳನ್ನು ಅವಶ್ಯಕತೆಗಿಂತ ಹೆಚ್ಚು ಕಡಿದಿರುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೬೨ (೧೮೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅರಣ್ಯಗಳಲ್ಲಿ ಕೈಗೊಳ್ಳಲಾಗುವ ಥಿನ್ನಿಂಗ್ ಯೋಜನೆ ಎಂದರೇನು; ಥಿನ್ನಿಂಗ್ ಕಾರಣದಿಂದಾಗಿ ಮರಗಳನ್ನು ಕಡಿಯಲು ಕಾರಣವೇನು;

(ಆ) ಥಿನ್ನಿಂಗ್‌ನಿಂದಾಗಿ ಆಗುವ ಅನುಕೂಲಗಳೇನು ; ಥಿನ್ನಿಂಗ್ ಮಾಡದಿದ್ದರೆ ಆಗುವ ಅನಾನುಕೂಲಗಳೇನು ; ಚಿಕ್ಕಮಗಳೂರು ಮತ್ತು ಕೊಪ್ಪ ವಿಭಾಗದ ಮೀಸಲು ಅರಣ್ಯ ಮತ್ತು ಸಾಗುವಾನಿ ನೆಡುತೋಪುಗಳಲ್ಲಿ ಬಾಳೆಹೊನ್ನೂರು ವಲಯದ ದೇವದಾಸ ಮೀಸಲು ಅರಣ್ಯ ಮತ್ತು ಇನ್ನಿತರ ಕಡೆಗಳಲ್ಲಿ ಥಿನ್ನಿಂಗ್ ಹೆಸರಿನಲ್ಲಿ

ಸಾವಿರಾರು ಮರಗಳನ್ನು ಸರ್ಕಾರವು ಇತ್ತೀಚೆಗೆ ಕಡಿಯಲು ಪ್ರಾರಂಭಿಸಿರುವುದು ನಿಜವೇ; ಸದರಿ ಅರಣ್ಯಗಳಲ್ಲಿ ಥಿನ್ನಿಂಗ್‌ಗಾಗಿ ಮರ ಕಡಿಯಲು ಪ್ರಾರಂಭಿಸಿದ್ದು ಯಾವಾಗ ;

(ಇ) ಸದರಿ ಅರಣ್ಯಗಳಲ್ಲಿ ಎಷ್ಟು ಎಕರೆ ಜಾಗದಲ್ಲಿ ಎಷ್ಟು ಮರಗಳು ಬೆಳೆದಿವೆ ?

## ಕಂಬಳ ಕ್ರೀಡೆಗೆ ಸೂಕ್ತ ಕಾನೂನು ರೂಪಿಸಿ ಅಧಿಕೃತವಾಗಿ ಕಂಬಳಕ್ಕೆ ಅವಕಾಶ ನೀಡುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೬೩ (೧೯೧) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಂಬಳ ಕ್ರೀಡೆಯ ಇತಿಹಾಸವೇನು; ಕಂಬಳ ಕ್ರೀಡೆಯಿಂದ ಯಾವುದಾದರೂ ಅನಾನುಕೂಲಗಳಾಗಿವೆಯೇ;

(ಆ) ಕಂಬಳವನ್ನು ನಿಷೇಧಿಸುವಂತೆ ಯಾರು ನ್ಯಾಯಾಲಯದ ಮೊರೆ ಹೋಗಿದ್ದಾರೆ; ನ್ಯಾಯಾಲಯದ ಮೊರೆ ಹೋಗಲು ನ್ಯಾಯಾಲಯದಲ್ಲಿ ಯಾವ ಯಾವ ಕಾರಣಗಳನ್ನು ನೀಡಲಾಗಿದೆ; (ವಿವರ ನೀಡುವುದು)

(ಇ) ನ್ಯಾಯಾಲಯದ ಮೆಟ್ಟಿಲಲ್ಲಿರುವ ಈ ದಾವೆಯಲ್ಲಿ ಸರ್ಕಾರದ ಪಾತ್ರವೇನು ; (ವಿವರ ನೀಡುವುದು)

(ಈ) ಕರ್ನಾಟಕದಲ್ಲಿ ಪರಂಪರಾನುಗತವಾಗಿ ನಡೆದು ಬಂದಿರುವ ಕಂಬಳ ಕ್ರೀಡೆಗೆ ಸೂಕ್ತ ಕಾನೂನು ರೂಪಿಸಿ ಅಧಿಕೃತಗೊಳಿಸಲು ಸಾಧ್ಯವೇ;

(ಉ) ಈ ಸಂಬಂಧ ಕಂಬಳಕ್ಕೆ ಅವಕಾಶ ನೀಡುವಲ್ಲಿ ಸರ್ಕಾರದ ನಿಲುವೇನು ?

## ಮಹಿಳಾ ಉದ್ಯೋಗಿಗಳ ಸುರಕ್ಷತೆ ದೃಷ್ಟಿಯಿಂದ ಜಾರಿ ತಂದಿರುವ ೨೦೧೬ರ ನಿಯಮವನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೬೪ (೧೯೦) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಒಪ್ಪಂದ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹಿಳಾ ಉದ್ಯೋಗಿಗಳ ಸುರಕ್ಷತೆ ಹಾಗೂ ಅವರುಗಳಿಗೆ ಕನಿಷ್ಠ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಜಾರಿಗೆ ತರಲಾಗಿರುವ ಕರ್ನಾಟಕ ಒಪ್ಪಂದ ಕಾರ್ಮಿಕರ ನಿಯಂತ್ರಣ ಮತ್ತು ರದ್ಧತಿ ತಿದ್ದುಪಡಿ ನಿಯಮ, ೨೦೧೬ರ ಪ್ರಕಾರ ಜಾರಿಗೆ ತರಲಾಗಿರುವ ನಿಯಮಗಳೇನು; (ವಿವರ ನೀಡುವುದು)

(ಆ) ಈ ನಿಯಮ ಯಾರಿಗೆ ಅನ್ವಯವಾಗುತ್ತದೆ ; ಇದರನ್ವಯ ಸರ್ಕಾರವು ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದೆ; (ವಿವರ ನೀಡುವುದು)

(ಇ) ಇಲಾಖೆಯಿಂದ ಖಾಸಗಿ ಕಂಪನಿಗಳಲ್ಲಿ ಪರಿಶೀಲನೆ ನಡೆಸುವಾಗ ಕಂಡು ಬಂದ ಅಂಶಗಳೇನು ? (ವಿವರ ನೀಡುವುದು)

## ಇತ್ತೀಚೆಗೆ ಮೈಸೂರು ಮೃಗಾಲಯದಲ್ಲಿ ಹಕ್ಕಿಜ್ವರ ಕಾಣಿಸಿಕೊಂಡು ಕುಕ್ಕರಹಳ್ಳಿ ಪಕ್ಷಿಗಳಿಗೂ ಹಬ್ಬಿ, ಸಾವುನೋವು ಉಂಟಾಗಿರುವ ಬಗ್ಗೆ ಮತ್ತು ಅದನ್ನು ತಡೆಗಟ್ಟುವ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೬೫ (೧೮೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮೃಗಾಲಯದಲ್ಲಿ ಇತ್ತೀಚೆಗೆ ಹಕ್ಕಿಜ್ವರ ಕಾಣಿಸಿಕೊಂಡಿರುವುದು ನಿಜವೇ; ಇದು ಕಾಣಿಸಿಕೊಳ್ಳಲು ಕಾರಣವೇನು; ಇದನ್ನು ಗುಣಪಡಿಸಲು ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ;

(ಆ) ಈ ಜ್ವರದಿಂದಾಗಿ ಆಗಿರುವ ಪ್ರಾಣಿ ಪಕ್ಷಿಗಳ ಸಾವೆಷ್ಟು ; (ವಿವರ ನೀಡುವುದು)

(ಇ) ಮೃಗಾಲಯದಲ್ಲಿ ಹಕ್ಕಿ ಜ್ವರ ಕಾಣಿಸಿಕೊಂಡ ಪರಿಣಾಮ ರೋಗ ಹತ್ತಿರದ ಕುಕ್ಕರಹಳ್ಳಿ ಕೆರೆಯಲ್ಲಿನ ಪಕ್ಷಿಗಳಿಗೂ ಹರಡಿ ಪಕ್ಷಿಗಳ ಸಾವು ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಜ್ವರ ಬರದಂತೆ ತಡೆಗಟ್ಟಲು ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು;

(ಉ) ಈ ಜ್ವರವು ಅಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೂ ಹರಡುವ ಸಾಧ್ಯತೆಗಳಿದೆಯೇ; ಕೆಲಸಗಾರರಿಗೆ ಹರಡದಂತೆ ಏನು ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ ?

## ಬರ 'ಅಧ್ಯಯನ ತಂಡಗಳ' ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೧೬೭ (೧೦೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಉಂಟಾಗಿದ್ದ ತೀವ್ರ ಬರಗಾಲದ ಪರಿಸ್ಥಿತಿ ನಿಭಾಯಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; ಈ ನಿಟ್ಟಿನಲ್ಲಿ ಬರ ಅಧ್ಯಯನಕ್ಕೆ ತಂಡಗಳನ್ನು ರಾಜ್ಯ ಸರ್ಕಾರ ನೇಮಿಸಿದ್ದು ನಿಜವೇ;

(ಆ) ಯಾವ ಯಾವ ತಂಡಗಳು ಯಾರ ನೇತೃತ್ವದಲ್ಲಿ ಬರ ಅಧ್ಯಯನ ಪ್ರವಾಸ ಕೈಗೊಂಡಿದೆ ; (ಪ್ರವಾಸ ಕೈಗೊಂಡ ಪ್ರದೇಶ ಹಾಗೂ ದಿನಾಂಕ ಸಹಿತ ವಿವರ ಒದಗಿಸುವುದು)

(ಇ) ಅಧಿಕಾರಿಗಳ ತಂಡಗಳಲ್ಲದೆ ಮುಖ್ಯಮಂತ್ರಿ, ಸಚಿವರು ಕೈಗೊಂಡ ಬರ ಪ್ರವಾಸಗಳೆಷ್ಟು ? (ವಿವರ ನೀಡುವುದು)

## ರಾಜ್ಯದಲ್ಲಿರುವ ಬೇಡ ಜಂಗಮ ಕುಟುಂಬಗಳ ಸಂಖ್ಯೆ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೧೬೭ (೧೦೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಬೇಡ ಜಂಗಮ ಕುಟುಂಬಗಳ ಒಟ್ಟು ಸಂಖ್ಯೆ ಎಷ್ಟು ; ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಕುಟುಂಬಗಳಿವೆ; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಆ) ಈ ಕುಟುಂಬಗಳಿಗೆ ಸರ್ಕಾರದಿಂದ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ;

(ಇ) ಬೇರೆ ಬೇರೆ ರಾಜ್ಯಗಳಲ್ಲಿ ಬೇಡ ಜಂಗಮ ಜನಾಂಗದವರಿಗೆ ಮೀಸಲಾತಿ ಸೌಲಭ್ಯ ಒದಗಿಸಲಾಗಿದೆಯೇ; ಹಾಗಿದ್ದಲ್ಲಿ, ನಮ್ಮ ರಾಜ್ಯದಲ್ಲಿ ಬೇಡ ಜಂಗಮ ಮೀಸಲಾತಿ ಪ್ರಮಾಣಪತ್ರ ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಯಾರ್‍ಯಾರಿಗೆ ಒದಗಿಸಲಾಗಿದೆ ; (ತಾಲ್ಲೂಕುವಾರು ಹೆಸರು ಸಹಿತ ವಿವರ ಒದಗಿಸುವುದು)

(ಈ) ಬೇಡ ಜನಾಂಗದವರಿಗೆ ಪರಿಶಿಷ್ಟ ಜಾತಿ ಪ್ರಮಾಣಪತ್ರ ಪಡೆಯಲು ಇರುವ ಮಾನದಂಡಗಳೇನು ?

## ಕೂಲಿ ಕಾರ್ಮಿಕರುಗಳಿಗೆ ಇಲಾಖೆಯಿಂದ ನೀಡುವ ಸುರಕ್ಷತೆ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೮ (೧೨೪) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಟ್ಟಡಗಳ ಕೂಲಿ ಕಾರ್ಮಿಕರು ಆಕಸ್ಮಿಕವಾಗಿ ಅವಘಡದಲ್ಲಿ ಸಿಲುಕಿಕೊಂಡಲ್ಲಿ ಕಾರ್ಮಿಕ ಇಲಾಖೆಯಿಂದ ಒದಗಿಸಲಾಗುವ ಸೌಲಭ್ಯಗಳೇನು ;

(ಆ) ಯಾವ ಸ್ಥಿತಿಯಲ್ಲಿ ಗಾಯಗೊಂಡ ಕಾರ್ಮಿಕರಿಗೆ ಸೌಲಭ್ಯಗಳು ಸಿಗಲಿವೆ; ಸೌಲಭ್ಯಗಳನ್ನು ಪಡೆಯಲು ಇರುವ ಮಾನದಂಡವೇನು; ಪರಿಹಾರವೇನಾದರೂ ವಿತರಿಸಲಾಗಿದೆಯೇ; ವಿತರಿಸಿದ್ದಲ್ಲಿ, ಕಳೆದ ೩ ವರ್ಷಗಳ ವಿವರ ನೀಡುವುದು;

(ಇ) ಕಳೆದ ಎರಡು ವರ್ಷಗಳ ಅವಧಿಯಲ್ಲಿ ಬೆಂಗಳೂರು ಮಹಾನಗರದಲ್ಲಿ ಕಟ್ಟಡ ಕಾಮಗಾರಿ ವೇಳೆ ಮೃತ ಹಾಗೂ ಗಾಯಗೊಂಡ ಕಾರ್ಮಿಕರ ಸಂಖ್ಯೆ ಎಷ್ಟು ; ಗಾಯಗೊಂಡವರಿಗೆ ಒದಗಿಸಿರುವ ಸೌಲಭ್ಯಗಳೇನು? (ಹೆಸರು ಸಹಿತ ವಿವರ ನೀಡುವುದು)

## ಬರ ನಿರ್ವಹಣೆಗೆ ಕೇಂದ್ರ ಸರ್ಕಾರದಿಂದ ನೀರಿನ ಅನುದಾನ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೯ (೧೨೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೫–೧೬ನೇ ಸಾಲಿನಲ್ಲಿ ಬರ ನಿರ್ವಹಣೆ, ಅತಿವೃಷ್ಟಿ ಮತ್ತು ಅನಾವೃಷ್ಟಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದಿಂದ ಕಂದಾಯ ಇಲಾಖೆಗೆ ಬಿಡುಗಡೆಯಾಗಿರುವ ಹಣವೆಷ್ಟು ; ಇದಕ್ಕಾಗಿ ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು ;

(ಆ) ಬರ ಎದುರಿಸುತ್ತಿರುವ ಯಾವ ಯಾವ ತಾಲ್ಲೂಕುಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ; ಈಗಾಗಲೇ ಬಿಡುಗಡೆಯಾದ ಹಣದಿಂದ ಬರವನ್ನು ಎಷ್ಟರ ಮಟ್ಟಿಗೆ ನೀಗಿಸಲಾಗಿದೆ ;

(ಇ) ಬರ ನಿರ್ವಹಣೆಗೆ ಬಿಡುಗಡೆಯಾಗಿರುವ ಹಣವನ್ನು ಯಾವ ಯಾವ ಯೋಜನೆಗಳಿಗೆ ಬಳಸಿಕೊಳ್ಳಲಾಗಿದೆ ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಪರಿಸರ ಸಂರಕ್ಷಣೆ ಮತ್ತು ಅರಣ್ಯಾಭಿವೃದ್ಧಿಗೆ ಕೇಂದ್ರ ಸರ್ಕಾರದ ಅನುದಾನ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೦ (೧೨೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪರಿಸರ ಸಂರಕ್ಷಣೆ ಮತ್ತು ಅರಣ್ಯಾಭಿವೃದ್ಧಿ (ಕೆರೆ ಅಭಿವೃದ್ಧಿ ಸೇರಿದಂತೆ) ಉದ್ದೇಶದಿಂದ ಕೇಂದ್ರ ಸರ್ಕಾರ ರಾಜ್ಯಕ್ಕೆ ಬಿಡುಗಡೆ ಮಾಡಿರುವ ಹಣವೆಷ್ಟು ;

(ಆ) ರಾಜ್ಯ ಸರ್ಕಾರವೇನಾದರೂ ಪರಿಸರ ಸಂರಕ್ಷಣೆ ಮತ್ತು ಅರಣ್ಯಾಭಿವೃದ್ಧಿ ಹೆಸರಿನಲ್ಲಿ ನೆರವನ್ನು ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ; ಸಲ್ಲಿಸಿದ್ದಲ್ಲಿ, ಯಾವ ಯಾವ ಯೋಜನೆಗಳಿಗೆ ಸಲ್ಲಿಸಲಾಗಿದೆ; ಕೇಂದ್ರ ಸರ್ಕಾರದ ನಿಲುವೇನು?

## ಕ್ರೀಡೆ ಮತ್ತು ಕ್ರೀಡಾಂಗಣಗಳ ಅಭಿವೃದ್ಧಿ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೧ (೧೨೩) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಯುವ ಜನಾಂಗದ ಸಬಲೀಕರಣದ ಉದ್ದೇಶದಿಂದ ಕ್ರೀಡೆ ಮತ್ತು ಕ್ರೀಡಾಂಗಣಗಳ ಅಭಿವೃದ್ಧಿ ಹಾಗೂ ಅಂತರರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ; ಸಲ್ಲಿಸಿದ್ದಲ್ಲಿ, ಕೇಂದ್ರ ಸರ್ಕಾರದ ನಿಲುವೇನು;

(ಆ) ಇತ್ತೀಚೆಗೆ ಯುವ ಸಬಲೀಕರಣಕ್ಕಾಗಿ ರಾಜ್ಯದಲ್ಲಿ ರಾಜ್ಯ ಸರ್ಕಾರ ಕೈಗೊಂಡಿರುವ ವಿನೂತನ ಯೋಜನೆ ಅಥವಾ ಕಾರ್ಯಕ್ರಮಗಳೇನು ; (ವಿವರ ನೀಡುವುದು)

(ಇ) ರಾಜ್ಯ ಸರ್ಕಾರದಿಂದ ಮೇಲ್ಕಂಡ ಉದ್ದೇಶಗಳಿಗಾಗಿ ಮೀಸಲಿಡಲಾಗಿದ್ದ ಅನುದಾನ ಎಷ್ಟು ? (ಯೋಜನೆವಾರು ಬಳಕೆಯ ವಿವರ ನೀಡುವುದು)

## ನೀರಾವರಿ ಯೋಜನೆಗಳಿಗಾಗಿ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೨ (೧೨೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೩-೧೪, ೨೦೧೪-೧೫ ಮತ್ತು ೨೦೧೫-೧೬ ಸಾಲಿನಲ್ಲಿ ರಾಜ್ಯದ ಬೃಹತ್ ಮತ್ತು ಮಧ್ಯಮ ನೀರಾವರಿ ಇಲಾಖೆಗೆ ಯಾವ ಯಾವ ಯೋಜನೆಗಳಿಗಾಗಿ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಿದೆ ; ಬಿಡುಗಡೆಯಾದ ಹಣವೆಷ್ಟು ;

(ಆ) ಬಿಡುಗಡೆಯಾದ ಹಣದಲ್ಲಿ ಯಾವ ಯಾವ ಯೋಜನೆಗಳಿಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ? (ಯೋಜನೆಗಳ ವಿವರ ಮತ್ತು ಬಳಕೆಯ ಸಂಪೂರ್ಣ ಜಿಲ್ಲಾವಾರು ಮಾಹಿತಿ ನೀಡುವುದು)

## ನಂಜನಗೂಡಿನ ದೇವಾಲಯದ ಸುತ್ತಲಿನ ಪರಿಸರದಲ್ಲಿ ಸ್ವಚ್ಛತೆ ಇಲ್ಲದಿರುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೭೩ (೧೩೪) ಮಾನ್ಯ ಜವಳಿ ಹಾಗೂ ಮುಜರಾಯಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಾಲಯಕ್ಕೆ ಕಳೆದ ಸಾಲಿನಲ್ಲಿ ಬಂದಂತಹ ಕಾಣಿಕೆ ಎಷ್ಟು ; (ಸಂಪೂರ್ಣ ವಿವರ ನೀಡುವುದು)

(ಆ) ಈ ದೇವಾಲಯದ ಅಭಿವೃದ್ಧಿಗಾಗಿ ನೀಡಲಾದ ಅನುದಾನ ಎಷ್ಟು; ಕೈಗೊಂಡ ಕಾಮಗಾರಿಗಳು ಹಾಗೂ ವ್ಯಯಿಸಲಾದ ಖರ್ಚಿನೊಂದಿಗೆ ವಿವರ ನೀಡುವುದು ;

(ಇ) ಈ ದೇವಾಲಯದಲ್ಲಿ ಸ್ವಚ್ಛತೆಯನ್ನು ಕಾಪಾಡುವಲ್ಲಿ ಆಡಳಿತ ಮಂಡಳಿಯು ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಕಾವೇರಿ ನದಿಯ ಪುನಶ್ಚೇತನಕ್ಕೆ ಆಯವ್ಯಯದಲ್ಲಿ ಅನುದಾನ ಮೀಸಲಿಡುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೭೪ (೧೩೫) ಮಾನ್ಯ ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾವೇರಿ ನದಿಯ ಉಗಮ ಸ್ಥಾನದಿಂದ ನಮ್ಮ ರಾಜ್ಯದಲ್ಲಿ ಹರಿಯುವ ಒಟ್ಟು ಉದ್ದ ಎಷ್ಟು ; ಕಾವೇರಿ ನದಿ ಹರಿಯುವ ದಂಡೆಯಲ್ಲಿರುವ ಪಟ್ಟಣ, ನಗರಗಳೆಷ್ಟು ; (ಹೆಸರುಗಳೊಂದಿಗೆ ವಿವರ ನೀಡುವುದು)

(ಆ) ಈ ಪಟ್ಟಣ, ನಗರಗಳಿಂದ ಕಲುಷಿತ ನೀರು ಕಾವೇರಿ ನದಿಗೆ ಹರಿಯದಂತೆ ತಡೆಯಲು ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಇ) ಕಾವೇರಿ ನದಿಯ ಪುನಶ್ಚೇತನ ಮಾಡಿ ಹೆಚ್ಚಿನ ನೀರು ಹರಿಯುವಂತೆ ಮಾಡಲು, ನದಿ ಪಾತ್ರದಲ್ಲಿ ಒತ್ತುವರಿ ತೆರವು ಹಾಗೂ ಈ ಪ್ರದೇಶದಲ್ಲಿ ಗಿಡಗಳನ್ನು ನೆಡಲು ಸರ್ಕಾರದ ಕ್ರಮಗಳೇನು ಮತ್ತು ಇದಕ್ಕಾಗಿ ಮೀಸಲಿಟ್ಟಿರುವ ಅನುದಾನ ಎಷ್ಟು ?

## ರಾಜ್ಯದಲ್ಲಿ ಮೋಜಿಗಾಗಿ/ಮಾಂಸಕ್ಕೆ ಕಾಡು ಪ್ರಾಣಿಗಳನ್ನು ಹತ್ಯೆ ಮಾಡುತ್ತಿರುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೭೫ (೧೩೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕಾಡು ಪ್ರಾಣಿಗಳನ್ನು ಮೋಜಿಗಾಗಿ ಮತ್ತು ಮಾಂಸಕ್ಕಾಗಿ ಕೊಂದ ಎಷ್ಟು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತವೆ ; ಬಂದಿದ್ದಲ್ಲಿ, ಸದರಿ ಪ್ರಕರಣಗಳ ಬಗ್ಗೆ ಕೈಗೊಂಡ ಕ್ರಮಗಳೇನು ; (ಜಿಲ್ಲಾವಾರು ವಿವರ ನೀಡುವುದು)

(ಆ) ಕಳೆದ ತಿಂಗಳು ಚಿಕ್ಕಮಗಳೂರಿನಲ್ಲಿ ಕಡವೆಗಳನ್ನು ಕೊಂದ ಪ್ರಕರಣದಲ್ಲಿ ಸರ್ಕಾರದ ಕ್ರಮಗಳೇನು ; (ವಿವರ ನೀಡುವುದು)

(ಇ) ಈ ರೀತಿ ಮೋಜಿಗಾಗಿ ಕಾಡು ಪ್ರಾಣಿಗಳನ್ನು ಕೊಲ್ಲುವವರ ವಿರುದ್ಧ ಸರ್ಕಾರದ ಕಠಿಣ ಕ್ರಮಗಳೇನು ? (ವಿವರ ನೀಡುವುದು)

## ಬೆಂಗಳೂರು ನಗರ ವ್ಯಾಪ್ತಿಯಲ್ಲಿರುವ ಸರ್ಕಾರಿ ಮತ್ತು ಕಂದಾಯ ಭೂಮಿ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೭೬ (೧೫೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಸೇರಿದಂತೆ ಸುತ್ತಮುತ್ತಲ ಪ್ರದೇಶ ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷದಿಂದ ವಶಪಡಿಸಿಕೊಂಡಿರುವ ಸರ್ಕಾರಿ ಹಾಗೂ ಕಂದಾಯ ಭೂಮಿ ಎಷ್ಟು ; (ತಾಲ್ಲೂಕುವಾರು, ಪ್ರದೇಶವಾರು ವಿವರ ಒದಗಿಸುವುದು)

(ಆ) ವಶಪಡಿಸಿಕೊಂಡಿರುವ ಜಾಗವನ್ನು ಯಾವ ಉದ್ದೇಶಕ್ಕೆ ಬಳಸಿಕೊಳ್ಳಲು ಸರ್ಕಾರ ನಿರ್ಧರಿಸಿದೆ ; ಸದರಿ ಒತ್ತುವರಿ ತೆರವು ಭೂಮಿಯಲ್ಲಿ ಅರ್ಬನ್‌ಫಾರೆಸ್ಟ್ ನಿರ್ಮಾಣ ಮಾಡಲು ಸರ್ಕಾರ ಉದ್ದೇಶಿದೆಯೇ ; (ವಿವರ ನೀಡುವುದು)

(ಇ) ವಶಕ್ಕೆ ಪಡೆದ ಜಾಗದಲ್ಲಿ ಅರಣ್ಯೀಕರಣ ಮಾಡಲು ಅವಕಾಶವಿದೆಯೇ ; ಮರುವಶಪಡಿಸಿಕೊಂಡಿರುವ ಪ್ರಕರಣಗಳಲ್ಲಿ ಯಾರಾದರೂ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿದ್ದಾರೆಯೇ ;

(ಈ) ಗಿಡನೆಡುವ ಕಾರ್ಯಕ್ಕಲ್ಲದೇ ಶಾಶ್ವತ ಕಟ್ಟಡ, ಸರ್ಕಾರಿ ಕಛೇರಿ, ಶಾಲೆ ಇತ್ಯಾದಿ ಇನ್ನಿತರ ಉದ್ದೇಶಿಗಳಿಗೆ ಭೂಮಿಯನ್ನು ನೀಡಬಹುದಾಗಿದೆ ;

(ಉ) ಈಗಾಗಲೇ ವಶಪಡಿಸಿಕೊಂಡಿರುವ ಪ್ರದೇಶದ ರಕ್ಷಣೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ವಶಪಡಿಸಿಕೊಂಡಿರುವ ಜಾಗದಲ್ಲಿ ಯಾರಾದರೂ ಪ್ರವೇಶ ಮಾಡಿರುವ ಪ್ರಕರಣಗಳು ಕಂಡುಬಂದಿದೆಯೇ ; ಬಂದಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳೇನು ?

## ಜಲಸಂಪನ್ಮೂಲ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೭೭ (೧೫೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಜಲಸಂಪನ್ಮೂಲ ಇಲಾಖೆಯಲ್ಲಿ ಖಾಲಿ ಇರುವ ಎಂಜಿನೀಯರುಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಒಬ್ಬ ಉನ್ನತಾಧಿಕಾರಿಗೆ ಒಂದಕ್ಕಿಂತ ಹೆಚ್ಚು ವಿಭಾಗಗಳ ಮೂಲಕ ಹೆಚ್ಚಿನ ಜವಾಬ್ದಾರಿ ಹೊರಿಸಿರುವುದು ನಿಜವೇ ;

(ಇ) ಲೋಕೋಪಯೋಗಿ ಇಲಾಖೆಯಿಂದ ಬಂದ ಕಾರ್ಯನಿರ್ವಾಹಕ ಎಂಜಿನೀಯರುಗಳು, ಸಹಾಯಕ ಕಾರ್ಯನಿರ್ವಾಹಕ ಎಂಜಿನೀಯರುಗಳ ಸಂಖ್ಯೆ ಎಷ್ಟು ; ಅವರಲ್ಲಿ ಎಷ್ಟು ಜನರಿಗೆ ಸ್ಥಳ ನಿಯುಕ್ತಿ ಮಾಡಲಾಗಿದೆ ;

(ಈ) ಭಾರಿ ನೀರಾವರಿ ಯೋಜನೆ ಕಾರ್ಯಾನುಷ್ಠಾನಕ್ಕೆ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇರುವುದು ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ತೆಗೆದುಕೊಂಡ ಕ್ರಮಗಳೇನು ?

## ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಹಾಗೂ ಪುನರ್ವಸತಿ ಕಲ್ಪಿಸುವ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೭೮ (೧೫೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಹಾಗೂ ಸೂಕ್ತ ಪರಿಹಾರ ಪುನರ್ವಸತಿ ಕಲ್ಪಿಸಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೆತ್ತಿಕೊಂಡಿದೆ ; ಪರಿಹಾರ ಇತ್ಯರ್ಥಕ್ಕೆ ಸರ್ಕಾರ ಅನುಸರಿಸುವ ಮಾರ್ಗಸೂಚಿಗಳೇನು ; (ವಿವರ ಒದಗಿಸುವುದು)

(ಆ) ಇದಕ್ಕಾಗಿ ವಿಶೇಷ ಪ್ರಾಧಿಕಾರಗಳನ್ನು ರಚಿಸಲು ಸರ್ಕಾರ ಮುಂದಾಗಿದೆಯೇ ; ಇದಕ್ಕೆ ಕಾರಣಗಳೇನು ; ಇದರ ವ್ಯಾಪ್ತಿ ಹಾಗೂ ಕಾರ್ಯವಿಧಾನದ ವಿವರಗಳನ್ನು ಒದಗಿಸುವುದು ;

(ಇ) ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ಈ ಕೇಂದ್ರಗಳನ್ನು ಸ್ಥಾಪಿಸಲಾಗುವುದು ; ಇವುಗಳ ಮೇಲುಸ್ತುವಾರಿ ಜವಾಬ್ದಾರಿಯನ್ನು ಯಾರಿಗೆ ವಹಿಸಲಾಗುತ್ತದೆ ;

(ಈ) ಈ ಭೂ ವಿವಾದಗಳನ್ನು ಯಾವ ಕಾಲಮಿತಿಯಲ್ಲಿ ಬಗೆಹರಿಸಲಾಗುತ್ತದೆ ; ಸದರಿ ಪ್ರಾಧಿಕಾರದ ಮೂಲಕ ಪರಿಹಾರ ಹಾಗೂ ಇತ್ಯರ್ಥಗೊಳ್ಳದಿದ್ದಲ್ಲಿ ಮುಂದೆ ಭೂಮಿ ಕಳೆದುಕೊಂಡ ರೈತರು ಅನುಸರಿಸಬೇಕಾದ ಮಾರ್ಗಗಳೇನು ; (ವಿವರ ನೀಡುವುದು)

(ಉ) ಸದರಿ ಪ್ರಾಧಿಕಾರವು ಕಾರ್ಯಾನುಷ್ಠಾನಕ್ಕೆ ಬರಲಿರುವುದು ಯಾವಾಗ ; ಇದರಿಂದ ಸರ್ಕಾರಕ್ಕೆ ಆಗುವ ವೆಚ್ಚ ಎಷ್ಟು ?

## ಭೂ ಕಬಳಿಕೆ ಮತ್ತು ಅಕ್ರಮ–ಸಕ್ರಮಗಳ ಕುರಿತು

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೭೯ (೧೫೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಭೂ ಕಬಳಿಕೆ ನಿಷೇಧ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆಯೇ ; ನಿರ್ಧರಿಸಿದ್ದಲ್ಲಿ, ಈ ಕಾಯ್ದೆ ಯಾವಾಗಿನಿಂದ ಜಾರಿಗೆ ಬರುತ್ತದೆ ;

(ಆ) ಭೂ ಕಬಳಿಕೆ, ಭೂ ಒತ್ತುವರಿ ಮತ್ತು ಅಕ್ರಮ–ಸಕ್ರಮಗಳ ವಿಚಾರಗಳು ಇತ್ತೀಚೆಗೆ ಗೊಂದಲಮಯ ವಾತಾವರಣವನ್ನು ಸೃಷ್ಟಿ ಮಾಡಿರುವುದು ನಿಜವೇ ; ಇಂತಹ ಪರಿಸ್ಥಿತಿಯಲ್ಲಿ ಇದನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ನಗರ ಹಾಗೂ ಗ್ರಾಮಾಂತರ ಪ್ರದೇಶಗಳ ಅಕ್ರಮ–ಸಕ್ರಮಗಳು ಯಾವ ರೀತಿ ಪರಿಹರಿಸಲಾಗುತ್ತದೆ ; ಮತ್ತು ಇದಕ್ಕೆ ಇರುವ ಮಾನದಂಡಗಳೇನು ; (ವಿವರ ನೀಡುವುದು)

(ಈ) ಅಕ್ರಮ–ಸಕ್ರಮಕ್ಕಾಗಿ ಇರುವ ಅವಧಿಯನ್ನು ವಿಸ್ತರಣೆ ಮಾಡುವ ಪ್ರಸ್ತಾವ ಸರ್ಕಾರಕ್ಕಿದೆಯೇ ;

(ಉ) ಗ್ರಾಮೀಣ ಪ್ರದೇಶದಲ್ಲಿ ಒತ್ತುವರಿ ತೆರವು ಹಾಗೂ ಅಕ್ರಮ–ಸಕ್ರಮಗಳ ವಿಚಾರದ ಬಗ್ಗೆ ಸರ್ಕಾರದ ನಿಲುವೇನು ? (ಸ್ಪಷ್ಟಪಡಿಸುವುದು)

## ಅಧೀನ ನ್ಯಾಯಾಲಯಗಳ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೮೦ (೧೫೬) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಅಧೀನ ನ್ಯಾಯಾಲಗಳ ಸಂಖ್ಯೆ ಎಷ್ಟು ;

(ಆ) ಅಧೀನ ನ್ಯಾಯಾಲಯಗಳಲ್ಲಿ ಭದ್ರತೆ ವ್ಯವಸ್ಥೆಯಲ್ಲಿ ಲೋಪವಾಗಿರುವುದು ನಿಜವೇ ;

(ಇ) ಹಲವೆಡೆ ಕೆಳ ಹಂತದ ನ್ಯಾಯಾಲಯದ ಸಂಕೀರ್ಣಕ್ಕೆ ಸೂಕ್ತ ಕಾಂಪೌಂಡ್ ವ್ಯವಸ್ಥೆ ಕೂಡ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಬಿಗಿ ಭದ್ರತೆ ವ್ಯವಸ್ಥೆಗೆ ಸರ್ಕಾರ ತೆಗೆದುಕೊಂಡ ಕ್ರಮವೇನು ?

## ಕ್ರೀಡಾಂಗಣಗಳಿಗೆ ತರಬೇತುದಾರರನ್ನು ಖಾಯಂ ಆಗಿ ನೇಮಕ ಮಾಡಿಕೊಳ್ಳುವ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):–**

೧೮೧ (೧೭೭) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ಕ್ರೀಡಾಂಗಣಗಳಿಗೆ ತರಬೇತುದಾರರನ್ನು ಖಾಯಂ ಆಗಿ ನೇಮಕ ಮಾಡಿಕೊಳ್ಳಲು ಇಲಾಖೆ ನಿರ್ಣಯ ಕೈಗೊಂಡಿದೆಯೇ ;

(ಆ) ಹಾಗಿದ್ದಲ್ಲಿ, ಎಷ್ಟು ಹುದ್ದೆಗಳನ್ನು ಮತ್ತು ಯಾವ–ಯಾವ ಕ್ರೀಡೆಗಳಿಗೆ ತರಬೇತಿದಾರರನ್ನು ನೇಮಕ ಮಾಡಿಕೊಳ್ಳಲಾಗುವುದು; ಈ ನೇಮಕಾತಿಗಳಿಗೆ ಯಾವ ವಿದ್ಯಾರ್ಹತೆಯನ್ನು ನಿಗಧಿಗೊಳಿಸಲಾಗಿದೆ? (ವಿವರ ನೀಡುವುದು)

## ಹೊಸ ತಾಲ್ಲೂಕುಗಳನ್ನು ರಚನೆ ಮಾಡುವ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):–**

೧೮೨ (೧೭೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ವಿವಿಧ ಕಂದಾಯ ಜಿಲ್ಲೆಗಳಲ್ಲಿ ಹಿಂದಿನ ಸರ್ಕಾರ ಘೋಷಣೆ ಮಾಡಿದಂತೆ ಮುಂಬರುವ ಬಜೆಟ್ ಅಧಿವೇಶನದಲ್ಲಿ ಹೊಸದಾಗಿ ತಾಲ್ಲೂಕು ರಚನೆ ಮಾಡುವ ಕುರಿತು ನಿರ್ಧಾರ ಕೈಗೊಳ್ಳಲಾಗಿದೆಯೇ ;

(ಆ) ಹಾಗಿದ್ದಲ್ಲಿ, ಯಾವ ರೀತಿಯ ನಿರ್ಧಾರ ಕೈಗೊಳ್ಳಲಾಗಿದೆ ? (ವಿವರ ನೀಡುವುದು)

## ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು):–**

೧೮೩ (೧೧೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ೩ನೇ ಹಂತದ ಯೋಜನೆಗೆ ಬೇಕಾಗಿರುವ ಅನುದಾನ ಮತ್ತು ಭೂ ಪ್ರದೇಶ ಎಷ್ಟು ; ಈ ಯೋಜನೆಗಾಗಿ ಈಗಾಗಲೇ ಎಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ; ಸ್ವಾಧೀನ ಪ್ರಕ್ರಿಯೆ ಯಾವ ಹಂತದಲ್ಲಿದೆ ;

(ಆ) ಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿರುವ ಪ್ರತಿ ಎಕರೆ ಭೂಮಿಗೆ ಸರ್ಕಾರ ನೀಡುತ್ತಿರುವ ಒಟ್ಟು ಪರಿಹಾರದ ಮೊತ್ತವೆಷ್ಟು ;

(ಇ) ೩ನೇ ಹಂತದ ಯೋಜನೆಯನ್ನು ಪೂರ್ಣಗೊಳಿಸಲಾಗುವುದು ಯಾವಾಗ ;

(ಈ) ಈ ಯೋಜನೆಯಿಂದ ಎಷ್ಟು ಟಿ.ಎಂ.ಸಿ. ನೀರನ್ನು ಸಂಗ್ರಹಿಸಬಹುದು ; ಆ ನೀರನ್ನು ಯಾವ ಯಾವ ಪ್ರದೇಶಕ್ಕೆ ಮತ್ತು ಯಾವ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗುವುದು ?

## ಮಹಾದಾಯಿ ನ್ಯಾಯಮಂಡಳಿ ಮತ್ತು ಪರಿಹಾರ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು):–**

೧೮೪ (೧೧೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಹಾದಾಯಿ ನ್ಯಾಯಮಂಡಳಿ ಅಸ್ತಿತ್ವಗೊಂಡಿದ್ದು ಯಾವಾಗ ; ಅದರ ಕಾರ್ಯವ್ಯಾಪ್ತಿಯ ವಿವರ ನೀಡುವುದು ;

(ಆ) ನ್ಯಾಯಮಂಡಳಿಯ ಮುಂದೆ ಈ ನದಿ ನೀರಿನ ವ್ಯಾಜ್ಯ ಯಾವ ಹಂತದಲ್ಲಿದೆ ; ಮಂಡಳಿಯಿಂದ ನ್ಯಾಯ ಪಡೆಯಲು ಸರ್ಕಾರ ಇದುವರೆಗೂ ತೆಗೆದುಕೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಇ) ಮಹಾದಾಯಿ ಅಂತರರಾಜ್ಯ ಜಲ ವಿವಾದವನ್ನು ನ್ಯಾಯಾಧೀಕರಣದ ಹೊರಗೆ ಮೂರೂ ರಾಜ್ಯಗಳ ಮುಖ್ಯ ಮಂತ್ರಿಗಳ ಮಾತುಕತೆ ಮೂಲಕ ಪರಿಹರಿಸಿಕೊಳ್ಳಲು ನಡೆದಿರುವ ಪ್ರಯತ್ನಗಳು ಯಾವ ಹಂತದಲ್ಲಿವೆ ;

(ಈ) ಈ ಸಮಸ್ಯೆಯು ಯಾವಾಗ ಪರಿಹರಿಸಲ್ಪಡುತ್ತದೆ ಎಂದು ಸರ್ಕಾರ ಭಾವಿಸುತ್ತದೆ ? (ವಿವರ ನೀಡುವುದು)

## ಸರಾಸರಿ ಅರಣ್ಯ ಪ್ರದೇಶ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು):–**

೧೮೫ (೧೧೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಒಟ್ಟಾರೆ ಭೂಪ್ರದೇಶದ ವಿಸ್ತೀರ್ಣ ಎಷ್ಟು ; ಆ ಪೈಕಿ ಎಷ್ಟು ವಿಸ್ತೀರ್ಣದಲ್ಲಿ ಅರಣ್ಯ ಪ್ರದೇಶವಿದೆ ;

(ಆ) ಪ್ರಕೃತಿ ವಿಕೋಪಗಳಾದ ಅತಿವೃಷ್ಟಿ ಮತ್ತು ಅನಾವೃಷ್ಟಿ ತಡೆಯಲು ಹಾಗೂ ಪರಿಸರ ಸಮತೋಲನ ಕಾಪಾಡಲು ವೈಜ್ಞಾನಿಕವಾಗಿ ಇರಬೇಕಾಗಿರುವ ಅರಣ್ಯ ಪ್ರದೇಶವೆಷ್ಟು ;

(ಇ) ಸದ್ಯದಲ್ಲಿ ಯಥೇಚ್ಛವಾಗಿ ಬೆಳೆದು ನಿಂತಿರುವ ಅರಣ್ಯ ಪ್ರದೇಶದ ಒಟ್ಟು ವಿಸ್ತೀರ್ಣವೆಷ್ಟು ;

(ಈ) ಅರಣ್ಯ ಪ್ರದೇಶದ ರಾಷ್ಟ್ರೀಯ ಸರಾಸರಿ ಎಷ್ಟು ; ರಾಜ್ಯದ ಸರಾಸರಿ ಎಷ್ಟು ;

(ಉ) ರಾಷ್ಟ್ರೀಯ ಸರಾಸರಿಗೆ ಸರಿದೂಗಿಸಲು ರಾಜ್ಯ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

# ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳ ನೀರಿನ ಉಪಯೋಗ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು):–**

೧೮೬ (೧೧೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳ ನೀರಿನ ಸಾಮರ್ಥ್ಯ ಎಷ್ಟು ;

(ಆ) ಅನುಕ್ರಮವಾಗಿ ಈ ಜಲಾಶಯಗಳ ನೀರನ್ನು ಯಾವ ಯಾವ ಜಿಲ್ಲೆಯ, ತಾಲ್ಲೂಕಿನ ಮತ್ತು ಗ್ರಾಮಗಳ ಎಷ್ಟು ವಿಸ್ತೀರ್ಣದ ಜಮೀನಿಗೆ, ಕೃಷಿಗಾಗಿ ಹಾಗೂ ಇನ್ನಿತರ ಬಾಬ್ತುಗಳಿಗೆ ಉಪಯೋಗಿಸಿಕೊಳ್ಳಲಾಗುತ್ತಿದೆ ; ಯಾವ ಯಾವ ಬೆಳೆಗಳಿಗೆ ನೀರನ್ನುಣಿಸಲು ನಿಗಧಿಪಡಿಸಲಾಗಿದೆ ;

(ಇ) ಈ ಜಲಾಶಯಗಳ ಹಿನ್ನೀರಿನಿಂದ ಎಷ್ಟು ಕೆರೆಗಳಿಗೆ ಮತ್ತು ಯಾವ ಯಾವ ಗ್ರಾಮದ ಕೆರೆಗಳಿಗೆ ನೀರನ್ನು ತುಂಬಿಸಲು ಸರ್ಕಾರ ಯೋಜನೆಯನ್ನು ರೂಪಿಸಿದೆ ; ಆ ಪ್ರಕ್ರಿಯೆ ಯಾವ ಹಂತದಲ್ಲಿದೆ ; (ವಿವರ ನೀಡುವುದು)

(ಈ) ಅದಕ್ಕಾಗಿ ತಗಲುವ ಒಟ್ಟು ಅಂದಾಜು ವೆಚ್ಚ ಎಷ್ಟು ; ಅದರಲ್ಲಿ ಎಷ್ಟು ಹಣವನ್ನು ಈಗಾಗಲೇ ತೊಡಗಿಸಲಾಗಿದೆ ;

(ಉ) ಆ ಕೆರೆಗಳಿಗೆ ನೀರನ್ನು ತುಂಬಿಸುವುದರಿಂದ ಆಗಬಹುದಾದ ಉಪಯೋಗವೇನು ? (ವಿವರ ನೀಡುವುದು)

## ಸಣ್ಣ ನೀರಾವರಿ ಯೋಜನೆಗಳ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೭ (೧೩೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ३ ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜನಾಂಗಗಳಿಗಾಗಿ ಸಣ್ಣ ನೀರಾವರಿ ಇಲಾಖೆಯಿಂದ ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ ;

(ಆ) ಸದರಿ ಯೋಜನೆಗಳಿಗಾಗಿ ಎಷ್ಟು ಅನುದಾನವನ್ನು ಮಂಜೂರು ಮಾಡಲಾಗಿದೆ ; ಈ ಯೋಜನೆಗಳಲ್ಲಿ ಎಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ ; (ವರ್ಷಾವಾರು ವಿವರ ನೀಡುವುದು)

(ಇ) ಕಳೆದ ३ ವರ್ಷಗಳ ಅವಧಿಯಲ್ಲಿ ಎಸ್.ಸಿ.ಪಿ. ಹಾಗೂ ಟಿ.ಎಸ್.ಪಿ. ಯೋಜನೆ ಅಡಿ ಬೀದರ್ ಜಿಲ್ಲೆಯ ಎಷ್ಟು ಫಲಾನುಭವಿಗಳು ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ್ದಾರೆ ? (ವಿವರ ನೀಡುವುದು)

## ಬೀದರ್ ಜಿಲ್ಲೆಯಲ್ಲಿ ಸ್ಮಶಾನ ಭೂಮಿಯ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೮ (೧೩೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ಹೆಕ್ಟೇರ್ ಪ್ರದೇಶವನ್ನು ಸ್ಮಶಾನ ಭೂಮಿಗೆ ವಶಪಡಿಸಿಕೊಳ್ಳಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಬೀದರ್ ಜಿಲ್ಲೆ ಬಸವ ಕಲ್ಯಾಣ ತಾಲ್ಲೂಕಿನಲ್ಲಿ ಎಲ್ಲಾ ಸಮುದಾಯದವರಿಗೆ ಸ್ಮಶಾನ ಭೂಮಿಯನ್ನು ಹಂಚಿಕೆ ಮಾಡಲಾಗಿದೆಯೇ ; ಮಾಡಿದ್ದರೆ, ಗ್ರಾಮದಿಂದ ಎಷ್ಟು ದೂರದಲ್ಲಿ ಸ್ಮಶಾನ ಭೂಮಿಯನ್ನು ನೀಡಲಾಗಿದೆ ? (ತಾಲ್ಲೂಕುವಾರು ವಿವರ ನೀಡುವುದು)

## ಬೀದರ್ ಜಿಲ್ಲೆಯ ನಾಡ ಕಛೇರಿಗಳ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೯ (೧೪೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ಇರುವ ನಾಡ ಕಛೇರಿಗಳು ಎಷ್ಟು ; ಆ ಪೈಕಿ ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿರುವ ಕಛೇರಿಗಳ ಸಂಖ್ಯೆ ಎಷ್ಟು ; ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ನಾಡ ಕಛೇರಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಆ) ಈ ನಾಡ ಕಛೇರಿಗಳಲ್ಲಿ ಭೂಮಿ ಕೇಂದ್ರದ ವ್ಯವಸ್ಥೆ ಇದೆಯೇ ;

(ಇ) ಈ ಕಛೇರಿಗಳಿಗೆ ನೀಡಲಾಗಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ? (ವಿವರ ನೀಡುವುದು)

## ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡಗಳಿಗೆ ಸರ್ಕಾರಿ ದರ್ಖಾಸ್ತು ಜಮೀನಿನ ಭೂ ಪರಿವರ್ತನೆ ಮಿತಿ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೦ (೧೫೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸರ್ಕಾರದಿಂದ ದರ್ಖಾಸ್ತು ಮೂಲಕ ಮಂಜೂರಾಗಿರುವ ಜಮೀನಿನಲ್ಲಿ ಭೂ ಪರಿವರ್ತನೆ ಮಿತಿಯ ಆದೇಶ ಸಂ. ಆರ್.ಡಿ. ೧೦ ಎಲ್.ಜಿ.ಪಿ. ೨೦೦೭, ದಿನಾಂಕ : ೨೪–೦೪–೨೦೦೭ ಅನ್ನು ರದ್ದುಪಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ;

(ಆ) ಹಾಗಿದ್ದಲ್ಲಿ, ಈ ಮಿತಿಯನ್ನು ಸಡಿಲಿಸಿ ಇತರೆ ವರ್ಗಗಳಿಗೆ ನಿಗಧಿಪಡಿಸಿರುವ ಮಿತಿಯುನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೂ ಕಲ್ಪಿಸಲಾಗುವುದೇ ;

(ಇ) ಈ ಮಿತಿಯನ್ನು ಸಡಿಲಸಿರುವುದರಿಂದ ಸರ್ಕಾರಕ್ಕೆ ಆಗುವ ತೊಂದರೆಗಳೇನು ;

(ಈ) ಹಾಗಿದ್ದಲ್ಲಿ, ಎಷ್ಟು ದಿನಗಳಲ್ಲಿ ಈ ಮಿತಿಯುನ್ನು ಸಡಿಲಗೊಳಿಸಲಾಗುವುದು ?

## ಕೊಡಗು ಜಿಲ್ಲೆಯಲ್ಲಿ ಕಾಡಾನೆ ದಾಳಿಯಿಂದ ಪ್ರಾಣಹಾನಿ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೧ (೨೦೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳ ದಾಳಿಯಿಂದ ರೈತರು ಮತ್ತು ಸಾರ್ವಜನಿಕರು ಪದೇ ಪದೇ ಪ್ರಾಣ ಕಳೆದುಕೊಳ್ಳುತ್ತಿರುವುದು ಹಾಗೂ ತೀವ್ರತರವಾದ ದೈಹಿಕ ಅಂಗವಿಕಲತೆಗೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕಳೆದ ನಾಲ್ಕು ವರ್ಷಗಳಲ್ಲಿ ಈ ರೀತಿ ಪ್ರಾಣ ಹಾನಿ ಹಾಗೂ ದೈಹಿಕ ಅಂಗವಿಕಲತೆ ಸಂಭವಿಸಿದ ಪ್ರಕರಣಗಳ ಸಂಖ್ಯೆ ಎಷ್ಟು ; ಸದರಿ ಪ್ರಕರಣಗಳಲ್ಲಿ ನೀಡಿರುವ ಪರಿಹಾರದ ಮೊತ್ತವೆಷ್ಟು ; (ವರ್ಷವಾರು, ಪ್ರಕರಣವಾರು ಸಂಪೂರ್ಣ ವಿವರ ನೀಡುವುದು)

(ಇ) ಈ ರೀತಿಯ ದಾಳಿಗಳು ಕೊಡಗು ಜಿಲ್ಲೆಯಲ್ಲಿ ಪದೇ ಪದೇ ಸಂಭವಿಸುತ್ತಿರುವುದರಿಂದ ಅವುಗಳನ್ನು ಶಾಶ್ವತವಾಗಿ ತಪ್ಪಿಸುವ ಸಲುವಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

## ಕೊಡಗು ಜಿಲ್ಲೆಯಲ್ಲಿ ಪೈಕಾ ಯೋಜನೆ ಅನುಷ್ಠಾನ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೨ (೨೦೬) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫ ಮತ್ತು ೨೦೧೫–೧೬ ನೇ ಸಾಲಿನಲ್ಲಿ ಪೈಕಾ ಯೋಜನೆಯಡಿ ಕೊಡಗು ಜಿಲ್ಲೆಗೆ ಬಿಡುಗಡೆಯಾದ ಅನುದಾನವೆಷ್ಟು ;

(ಆ) ಆ ಪೈಕಿ ವಿನಿಯೋಗಿಸಲಾದ ಮತ್ತು ಬಾಕಿ ಇರುವ ಅನುದಾನವೆಷ್ಟು ;

(ಇ) ಸ್ಥಳೀಯ ಕ್ರೀಡೆ/ಕ್ರೀಡಾಪಟುಗಳ ಉತ್ತೇಜನಕ್ಕಾಗಿ ಪೈಕಾ ಯೋಜನೆಯಡಿ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳು ಯಾವುವು ?

## ಕೊಡಗು ಜಿಲ್ಲೆಯಲ್ಲಿ ಕಾಡಾನೆ ದಾಳಿಯಿಂದ ಬೆಳೆ ನಾಶ ಮತ್ತು ಜಾನುವಾರು ಮೇಲೆ ದಾಳಿ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೩ (೨೦೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿಯಿಂದ ರೈತರು ಬೆಳೆದ ಬೆಳೆಗಳು ನಾಶಕ್ಕೊಳಗಾಗಿರುವುದು ಹಾಗೂ ಜಾನುವಾರುಗಳು ದಾಳಿಗೊಳಗಾಗಿ ಮೃತಪಟ್ಟಿದ್ದರಿಂದ, ಸದರಿ ರೈತರು ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕಳೆದ ನಾಲ್ಕು ವರ್ಷಗಳಲ್ಲಿ ಸಂಭವಿಸಿದ ಈ ರೀತಿಯ ಪ್ರಕರಣಗಳ ಸಂಖ್ಯೆ ಎಷ್ಟು ; ಸದರಿ ಪ್ರಕರಣಗಳಲ್ಲಿ ನೀಡಿರುವ ಪರಿಹಾರದ ಮೊತ್ತವೆಷ್ಟು ; (ವರ್ಷವಾರು, ಪ್ರಕರಣವಾರು ಸಂಪೂರ್ಣ ವಿವರ ನೀಡುವುದು)

(ಇ) ಕೊಡಗು ಜಿಲ್ಲೆಯಲ್ಲಿ ಈ ರೀತಿಯ ಪ್ರಕರಣಗಳು ಪುನರಾವರ್ತನೆಯಾಗುತ್ತಿರುವುದರಿಂದ, ಅವುಗಳನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಾಜ್ಯದಲ್ಲಿ ಮೃತ ಪಟ್ಟ ಹುಲಿಗಳ ಬಗ್ಗೆ ಮಾಹಿತಿ ನೀಡುವ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೪ (೧೨೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಜನವರಿ ೨೦೧೭ ರಿಂದ ಇದುವರೆವಿಗೂ ರಾಜ್ಯದಲ್ಲಿ ಮೃತಪಟ್ಟ ಹುಲಿಗಳ ಸಂಖ್ಯೆ ಎಷ್ಟು ; (ಎಲ್ಲೆಲ್ಲಿ ಕಾರಣ ಸಹಿತ ವಿವರ ನೀಡುವುದು)

(ಆ) ರಾಜ್ಯದ ಅರಣ್ಯಗಳಲ್ಲಿ ಹುಲಿಗಳ ಸಂಖ್ಯೆ ಏರಿಕೆಯಾಗಿ, ಅವುಗಳ ನಡುವೆ ಪರಸ್ಪರ ಕಾದಾಟ ಏರ್ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಇಂತಹ ಕಾದಾಡದಲ್ಲಿ ಗಾಯಗೊಂಡ ಹುಲಿಗಳನ್ನು ಸಂರಕ್ಷಿಸಲು ಸರ್ಕಾರದ ಕ್ರಮಗಳೇನು ; (ವಿವರ ನೀಡುವುದು)

(ಈ) ಈ ರೀತಿ ಗಾಯಗೊಂಡ ಹುಲಿಗಳನ್ನು ಹಿಡಿಯುವಾಗ ಅರಣ್ಯ ಇಲಾಖೆಯ ಸಿಬ್ಬಂದಿಗಳ ಅಚಾತುರ್ಯದಿಂದ ಹಲವು ಹುಲಿಗಳು ಸಾಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

**ಶ್ರೀನಿವಾಸ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. 0246/800 ಪ್ರತಿಗಳು/01–02–2017